# ಎಸ್ತೇರಳು

### ವಷ್ಟಿ ರಾಣಿಯಿಂದ ರಾಜಾಜ್ಞೆಯ ತಿರಸ್ಕಾರ

1 1ಅಹಷ್ವೇರೋಷನು ರಾಜನಾಗಿದ್ದಾಗ ನಡೆದ
ಘಟನೆ. ಇಂಡಿಯಾದಿಂದ ಇಥಿಯೋಪ್ಯದ ತನಕ
ನೂರಿಪ್ಪತ್ತೇಳು ಸಂಸ್ಥಾನಗಳನ್ನು ಅವನು ಆಳುತ್ತಿದ್ದನು.
2ಅವನು ತನ್ನ ರಾಜಧಾನಿಯಾಗಿದ್ದ ಶೂಷನ್‌ನಲ್ಲಿ
ಸಿಂಹಾಸನಾರೂಢನಾಗಿ ರಾಜ್ಯವಾಳುತ್ತಿದ್ದನು.

3ತನ್ನ ಆಳ್ವಿಕೆಯ ಮೂರನೆ ವರ್ಷದಲ್ಲಿ ರಾಜ್ಯದ
ಅಧಿಕಾರಿಗಳಿಗೂ ನಾಯಕರುಗಳಿಗೂ ಒಂದು ಔತಣ
ವನ್ನು ಏರ್ಪಡಿಸಿದನು. ಮೇದ್ಯ ಮತ್ತು ಪರ್ಶಿಯದ ಎಲ್ಲಾ
ಸೈನ್ಯಾಧಿಕಾರಿಗಳೂ ಪ್ರಧಾನರೂ ಔತಣದಲ್ಲಿ ಭಾಗ
ವಹಿಸಿದ್ದರು. 4ಔತಣ ಸಮಾರಂಭವು ನೂರೆಂಭತ್ತು
ದಿನಗಳ ತನಕ ಮುಂದುವರೆಯಿತು. ಆ ಸಮಯದಲ್ಲಿ
ತನ್ನ ರಾಜ್ಯದ ಸಕಲ ವೈಭವವನ್ನೂ ಅರಮನೆಯ
ಐಶ್ವರ್ಯವನ್ನೂ ಅತಿಥಿಗಳಿಗೆ ಪ್ರದರ್ಶಿಸಿದನು. 5ಆ
ನೂರೆಂಭತ್ತು ದಿನಗಳು ಕಳೆದ ಬಳಿಕ ಅಹಷ್ವೇರೋಷನು
ಮತ್ತೆ ಇನ್ನೊಂದು ಔತಣವನ್ನು ಒಂದು ವಾರದ ತನಕ
ಮುಂದುವರಿಸಿದನು. ಇದು ಅರಮನೆಯ ಒಳಗಿದ್ದ
ಉದ್ಯಾನವನದಲ್ಲಿ ನಡೆಯಿತು. ಇದಕ್ಕೆ ಶೂಷನ್ ನಗರ
ದಿಂದ ಗಣ್ಯರು, ಸಾಮಾನ್ಯರು ಎಂಬ ಭೇದಭಾವವಿಲ್ಲದೆ
ಎಲ್ಲರೂ ಆಮಂತ್ರಿಸಲ್ಪಟ್ಟಿದ್ದರು. 6ಆ ಉದ್ಯಾನವನವು
ಬಿಳಿ ಮತು ನೀಲಿಬಣ್ಣಗಳ ಬಟ್ಟೆಗಳಿಂದ ಶೃಂಗರಿಸ
ಲ್ಪಟ್ಟಿತ್ತು. ಅವುಗಳನ್ನು ಬಿಳಿ ಮತ್ತು ನೇರಳೆ ಬಣ್ಣದ
ದಾರಗಳಿಂದ ಬೆಳ್ಳಿಯ ಉಂಗುರಗಳಲ್ಲಿ ಕಟ್ಟಲ್ಪಟ್ಟ ಅಮೃತ
ಶಿಲೆಯ ಕಂಬಗಳಿಗೆ ತೂಗುಹಾಕಿದ್ದರು. ಬೆಲೆಬಾಳುವ
ಕಲ್ಲುಗಳಿಂದಲೂ ಮುತ್ತು ಚಿಪ್ಪು, ರತ್ನಶಿಲೆಗಳಿಂದಲೂ
ಅಲಂಕೃತವಾದ ನೆಲದ ಮೇಲೆ ಬೆಳ್ಳಿಬಂಗಾರಗಳಿಂದ
ಮಾಡಿದ್ದ ಆಸನಗಳನ್ನಿಟ್ಟಿದ್ದರು. 7ಅತಿಥಿಗಳಿಗೆ ಬಂಗಾ
ರದ ಪಾನಪಾತ್ರೆಯಲ್ಲಿ ದ್ರಾಕ್ಷಾರಸವನ್ನು ಕುಡಿಯಲು
ಕೊಟ್ಟರು. ಬೇರೆಬೇರೆ ವಿಧದ ಪಾತ್ರೆಗಳನ್ನು ಉಪ
ಯೋಗಿಸಲಾಗಿತ್ತು. ರಾಜನ ಔದಾರ್ಯಕ್ಕೆ ತಕ್ಕಂತೆ
ದ್ರಾಕ್ಷಾರಸವು ಧಾರಾಳವಾಗಿ ಹಂಚಲ್ಪಡುತ್ತಿತ್ತು. 8ತಮ್ಮ
ಇಷ್ಟಾನುಸಾರವಾಗಿ ದ್ರಾಕ್ಷಾರಸವನ್ನು ಕುಡಿಯಲು ಅತಿಥಿ
ಗಳಿಗೆ ಕೊಡಬೇಕೆಂದು ಸೇವಕರಿಗೆ ರಾಜಾಜ್ಞೆಯಾಗಿತ್ತು.
ರಾಜಸೇವಕರು ಆ ಆಜ್ಞೆಯನ್ನು ಪಾಲಿಸಿದರು.

9ರಾಜನ ಅರಮನೆಯಲ್ಲಿ ವಷ್ಟಿರಾಣಿಯೂ ಅದೇ
ಪ್ರಕಾರ ಸ್ತ್ರೀಯರಿಗೂ ಔತಣವನ್ನು ಮಾಡಿಸಿದ್ದಳು.

10–11ಔತಣದ ಏಳನೆಯ ದಿನದಲ್ಲಿ ರಾಜನು
ದ್ರಾಕ್ಷಾರಸ ಕುಡಿದು ಆನಂದಲಹರಿಯಲ್ಲಿದ್ದಾಗ
ತನ್ನ ಆಸ್ಥಾನ ಕಂಚುಕಿಯರಾದ ಮೆಹೂಮಾನ್,
ಬಿಜತಾ, ಹರ್ಬೋನಾ, ಬಿಗೆತಾ, ಅಬಗೆತಾ, ಜೇತರ್,
ಕರ್ಕಸ್ ಎಂಬ ಏಳು ಮಂದಿಗೆ, "ಹೋಗಿ ವಷ್ಟಿರಾಣಿಗೆ
ರಾಜಕಿರೀಟವನ್ನು ತೊಡಿಸಿ ಕರೆದುಕೊಂಡು ಬನ್ನಿ"
ಎಂದು ಆಜ್ಞಾಪಿಸಿದನು. ವಷ್ಟಿರಾಣಿಯು ಅತ್ಯಂತ
ಸುಂದರಿಯಾಗಿದ್ದಳು. ಆಕೆಯ ಸೌಂದರ್ಯವನ್ನು ತನ್ನ
ರಾಜ್ಯದ ಅಧಿಕಾರಿಗಳಿಗೆ ತೋರಿಸಬೇಕೆಂಬುದು ಅವನ
ಅಪೇಕ್ಷೆಯಾಗಿತ್ತು.

12ಆಸ್ಥಾನಸೇವಕರು ವಷ್ಟಿರಾಣಿಗೆ ರಾಜಾಜ್ಞೆಯನ್ನು
ತಿಳಿಸಿದಾಗ ಆಕೆಯು ಬರಲಿಲ್ಲ. ಇದರಿಂದ ರಾಜನು
ಕೋಪೋದ್ರಿಕ್ತನಾದನು. 13–14ಕಾನೂನು ಮತ್ತು
ದಂಡನೆಗಳ ಬಗ್ಗೆ ಪರಿಣಿತರಾಗಿದ್ದ ಮಂತ್ರಿಗಳ ಸಲಹೆ
ಕೇಳುವುದು ರಾಜನ ವಾಡಿಕೆಯಾಗಿತ್ತು. ಅದೇ ಪ್ರಕಾರ
ರಾಜನು ತನ್ನ ಸಲಹೆಗಾರರೊಂದಿಗೆ ಈ ವಿಷಯ
ವನ್ನು ಆಲೋಚಿಸಿದನು. ಅವರು ರಾಜನಿಗೆ ನಿಕಟವರ್ತಿ
ಗಳಾಗಿದ್ದರು. ಅವರು ಯಾರೆಂದರೆ ಕರ್ಷೆನಾ, ಶೇತಾರ್,
ಅದ್ಮಾತಾ, ತರ್ಷಿಷ್, ಮೆರೆಸ್, ಮರ್ಸೆನಾ, ಮೆಮೂಕಾನ್
ಎಂಬ ಏಳು ಮಂದಿ ಮೇದ್ಯದ ಮತ್ತು ಪರ್ಶಿಯದ ಪ್ರಮುಖ
ಅಧಿಕಾರಿಗಳು. 15“ಆಸ್ಥಾನ ಸೇವಕರ ಮೂಲಕ ಹೇಳಿ
ಕಳುಹಿಸಿದ ರಾಜಾಜ್ಞೆಯನ್ನು ವಷ್ಟಿ ರಾಣಿಯು ನಿರಾಕರಿಸಿ
ದ್ದಾಳೆ. ಇಂಥಾ ತಪ್ಪಿಗೆ ಯಾವ ಶಿಕ್ಷೆಯನ್ನು ವಿಧಿಸಬೇಕು?”
ಎಂದು ವಿಚಾರಿಸಿದನು.

16ಇತರ ಅಧಿಕಾರಿಗಳು ಆಲಿಸುತ್ತಿದ್ದಾಗ ಮೆಮೂಕಾನ್
ಎದ್ದುನಿಂತು, “ರಾಣಿ ವಷ್ಟಿಯು ತಪ್ಪು ಮಾಡಿದಳು. ಇದು
ರಾಜನಿಗೆ ವಿರುದ್ಧವಾಗಿ ಮಾತ್ರವೇ ಅಲ್ಲ, ರಾಜ್ಯದ
ಸಕಲ ನಾಯಕರಿಗೂ ಸಂಸ್ಥಾನಗಳ ಎಲ್ಲಾ ಜನರಿಗೂ
ವಿರುದ್ಧವಾದದ್ದು. 17ಹೇಗೆಂದರೆ: ರಾಣಿಯು ಮಾಡಿದ್ದನ್ನು
ರಾಜ್ಯದ ಇತರ ಸ್ತ್ರೀಯರು ಕೇಳಿ ತಾವೂ ತಮ್ಮ ಗಂಡಂದಿ
ರಿಗೆ ಅವಿಧೇಯರಾಗುವರು. ಅವರು ತಮ್ಮ ಗಂಡಂದಿ
ರಿಗೆ, ‘ರಾಜ ಅಹಷ್ವೇರೋಷನು ವಷ್ಟಿರಾಣಿಯನ್ನು ಕರೆದು
ಕೊಂಡು ಬರಬೇಕೆಂದು ಆಜ್ಞಾಪಿಸಿದನು, ಆದರೆ ಆಕೆ
ಬರಲಿಲ್ಲ’ ಎಂದು ಹೇಳುವರು.

18“ಪರ್ಶಿಯ ಮತ್ತು ಮೇದ್ಯ ನಾಯಕರುಗಳ ಹೆಂಡತಿ
ಯರು ಸಹ ವಷ್ಟಿರಾಣಿ ಈ ಹೊತ್ತು ಮಾಡಿದ್ದನ್ನು
ಕೇಳಿದ್ದಾರೆ. ಅವರು ಸಹ ವಷ್ಟಿರಾಣಿಯ ನಡತೆಯಿಂದ
ಪ್ರೋತ್ಸಾಹಿತರಾಗಿ ರಾಜನ ಮುಖ್ಯ ನಾಯಕರು
ಗಳೊಡನೆ ಅದೇರೀತಿ ವರ್ತಿಸುವರು. ಇದರಿಂದಾಗಿ
ಅಗೌರವವೂ ಕೋಪವೂ ತುಂಬಿಕೊಳ್ಳುತ್ತವೆ.

19“ಆದ್ದರಿಂದ ರಾಜನು ಒಪ್ಪುವುದಾದರೆ ನನ್ನ ಸಲಹೆ
ಏನೆಂದರೆ, ರಾಜನು ಒಂದು ರಾಜಾಜ್ಞೆಯನ್ನು ಹೊರಡಿಸ
ಬೇಕು. ಆ ಆಜ್ಞೆಯು ಪರ್ಶಿಯ ಮತ್ತು ಮೇದ್ಯ ರಾಜಶಾಸನ
ಗಳಲ್ಲಿ ಬರೆಯಲ್ಪಡಬೇಕು. ಪರ್ಶಿಯ ಮತ್ತು ಮೇದ್ಯ ರಾಜ
ಶಾಸನಗಳು ಎಂದಿಗೂ ಬದಲಾಗುವುದಿಲ್ಲ. ರಾಜಾಜ್ಞೆಯು
ಏನೆಂದರೆ, ರಾಜನಾದ ಅಹಷ್ವೇರೋಷನ ಸನ್ನಿಧಿಗೆ
ರಾಣಿಯು ಪ್ರವೇಶಿಸಲೇ ಕೂಡದು. ಮಾತ್ರವಲ್ಲ ರಾಜನು
ವಷ್ಟಿರಾಣಿಯ ಸ್ಥಾನವನ್ನು ಆಕೆಗಿಂತ ಉತ್ತಮಳಾದ
ಇನ್ನೊಬ್ಬಾಕೆಗೆ ಕೊಡಲಿ. 20ಈ ರಾಜಶಾಸನವು ವಿಶಾಲ
ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿ ಪ್ರಕಟಿಸಲ್ಪಟ್ಟಾಗ ಎಲ್ಲಾ
ಹೆಂಡತಿಯರು ತಮ್ಮ ಗಂಡಂದಿರಿಗೆ ಗೌರವವನ್ನು ಸಲ್ಲಿಸು
ವರು. ಶ್ರೇಷ್ಠರೂ ಕನಿಷ್ಠರೂ ಆದ ಎಲ್ಲಾ ಸ್ತ್ರೀಯರು ತಮ್ಮ
ಗಂಡಂದಿರಿಗೆ ಗೌರವವನ್ನು ಸಲ್ಲಿಸುವರು.”

21ರಾಜನೂ ಅವನ ಪ್ರಮುಖ ಅಧಿಕಾರಿಗಳೂ
ಈ ಸಲಹೆಯನ್ನು ಕೇಳಿ ಸಂತೋಷಪಟ್ಟರು ಮತ್ತು
ಅಹಷ್ವೇರೋಷ ರಾಜನು ಮೆಮೂಕಾನ್ ಹೇಳಿದ ಹಾಗೆ
ಮಾಡಿದನು. 22ಅಹಷ್ವೇರೋಷನು ತನ್ನ ರಾಜ್ಯದ ಎಲ್ಲಾ
ಕಡೆಗಳಿಗೆ, ಎಲ್ಲಾ ಸಂಸ್ಥಾನಗಳಿಗೆ ಅವರವರ ಭಾಷೆಯಲ್ಲಿ
ಪತ್ರಗಳನ್ನು ಬರೆಯಿಸಿ ರವಾನಿಸಿದನು. ಅವರವರ
ಭಾಷೆಯಲ್ಲಿ ಬರೆದ ಪತ್ರದಲ್ಲಿ ಪ್ರತಿಯೊಬ್ಬ ಗಂಡಸು ತನ್ನ
ಸಂಸಾರವನ್ನು ಆಳಬೇಕು ಎಂಬುದಾಗಿ ಬರೆಯಲ್ಪಟ್ಟಿತ್ತು.

### ಮಹಾರಾಣಿಯಾದ ಎಸ್ತೇರಳು

**2** 1ಸ್ವಲ್ಪ ಸಮಯದ ನಂತರ ರಾಜನ ಕೋಪವು
ಇಳಿಯಿತು. ಆಗ ವಷ್ಟಿಯನ್ನೂ ಆಕೆ ಮಾಡಿದ್ದನ್ನೂ
ಅವಳಿಂದಾಗಿ ತಾನು ಹೊರಡಿಸಿದ ರಾಜಾಜ್ಞೆಯನ್ನೂ
ಅವನು ನೆನಪಿಗೆ ತಂದುಕೊಂಡನು. 2ಆಗ ರಾಜನ
ಸನ್ನಿಧಿಸೇವಕರು ಈ ಸಲಹೆಕೊಟ್ಟರು: “ರಾಜನಿ
ಗೋಸ್ಕರ ರೂಪವತಿಯರಾದ ಕನ್ಯೆಯರನ್ನು ಹುಡುಕಿರಿ.
3ರಾಜನು ತನ್ನ ಸಾಮ್ರಾಜ್ಯದ ಪ್ರತಿಯೊಂದು
ಪ್ರಾಂತ್ಯದಲ್ಲೂ ನಾಯಕರುಗಳನ್ನು ಆರಿಸಲಿ. ಆ
ನಾಯಕರು ಅತ್ಯಂತ ರೂಪವತಿಯರಾದ ಕನ್ನಿಕೆಯರನ್ನು
ಶೂಷನ್ ರಾಜಧಾನಿಗೆ ಕರೆದುಕೊಂಡು ಬಂದು ಅವರನ್ನು
ಅಂತಃಪುರದಲ್ಲಿ ರಾಜನ ಸ್ತ್ರೀಯರೊಡನೆ ಇರಿಸಲಿ. ಆ
ಸ್ತ್ರೀಯರು ಮೇಲ್ವಿಚಾರಕನೂ ರಾಜನ ಕಂಚುಕಿಯೂ
ಆದ ಹೇಗೈಯ ಪರಿಪಾಲನೆಯಲ್ಲಿರಲಿ. ಬಳಿಕ ಅವರಿಗೆ
ಸೌಂದರ್ಯವರ್ಧಕ ಚಿಕಿತ್ಸೆ ಕೊಡಲಿ. 4ಅನಂತರ
ರಾಜನಿಗೆ ಇಷ್ಟವಾದ ಕನ್ನಿಕೆಯನ್ನು ವಷ್ಟಿಯ ಬದಲಾಗಿ
ರಾಣಿಯನ್ನಾಗಿ ಮಾಡಲಿ” ಎಂದು ಹೇಳಿದರು. ಅವರ
ಸಲಹೆ ರಾಜನಿಗೆ ಸರಿಯೆನಿಸಿದ್ದರಿಂದ ಅವನು ಅದಕ್ಕೆ
ಒಪ್ಪಿಕೊಂಡನು.

5ಆ ಸಮಯದಲ್ಲಿ ಬೆನ್ಯಾಮೀನ್ ಕುಲಕ್ಕೆ ಸೇರಿದ
ಮೊರ್ದೆಕೈ ಎಂಬ ಹೆಸರಿನ ಒಬ್ಬ ಯೊಹೂದ್ಯ
ನಿದ್ದನು. ಇವನು ಯಾಯೀರನಿಗೆ ಮಗನೂ ಕೀಷನಿಗೆ
ಮೊಮ್ಮಗನೂ ಆಗಿದ್ದನು. ಇವನು ರಾಜಧಾನಿಯಾದ
ಶೂಷನ್‌ನಲ್ಲಿ ವಾಸಮಾಡುತ್ತಿದ್ದನು. 6ಬಾಬಿಲೋನಿನ
ರಾಜನಾದ ನೆಬೂಕದ್ನೆಚ್ಚರನು ಜೆರುಸಲೇಮಿನಿಂದ
ಮೊರ್ದೆಕೈಯನ್ನು ಸೆರೆಹಿಡಿದು ತಂದಿದ್ದನು. ಯೆಹೂದದ
ರಾಜನಾದ ಯೆಹೋಯಾಕೀನನೊಂದಿಗೆ ಸೆರೆಬಿಯ್ಯಲ್ಪಟ್ಟ
ಗುಂಪಿನೊಂದಿಗೆ ಇವನೂ ಇದ್ದನು. 7ಇವನ ಬಳಿಯಲ್ಲಿ
ಇವನ ಚಿಕ್ಕಪ್ಪನ ಮಗಳಾದ ಹದೆಸ್ಸಾ ಎಂಬ ಕನ್ನಿಕೆ
ಇದ್ದಳು. ಈಕೆ ತಂದೆತಾಯಿಗಳಿಲ್ಲದ ತಬ್ಬಲಿಯಾಗಿದ್ದಳು.
ಈಕೆಯ ತಂದೆತಾಯಿಗಳು ಸತ್ತಂದಿನಿಂದ ಈಕೆಯನ್ನು
ಮೊರ್ದೆಕೈಯು ತನ್ನ ಮಗಳನ್ನಾಗಿ ಸ್ವೀಕರಿಸಿ ಸಾಕು
ತ್ತಿದ್ದನು. ಹದೆಸ್ಸಾಳನ್ನು ಎಸ್ತೇರ್ ಎಂಬ ಹೆಸರಿನಿಂದಲೂ
ಕರೆಯುತ್ತಿದ್ದರು. ತುಂಬಾ ಸೌಂದರ್ಯವತಿಯಾಗಿದ್ದ ಈಕೆ
ಆಕರ್ಷಕಳಾಗಿದ್ದಳು.

8ರಾಜಾಜ್ಞೆಯು ರಾಜ್ಯದ ಎಲ್ಲಾ ಭಾಗಗಳಲ್ಲಿ ಪ್ರಕಟಿಸ
ಲ್ಪಟ್ಟಾಗ ಅನೇಕ ಕನ್ಯೆಯರನ್ನು ರಾಜಧಾನಿಯಾದ
ಶೂಷನ್‌ಗೆ ಕರೆದುಕೊಂಡು ಬಂದರು. ಇವರನ್ನೆಲ್ಲಾ
ಹೇಗೈಯ ವಶಕ್ಕೆಕೊಟ್ಟರು. ಆ ಕನ್ಯೆಯರಲ್ಲಿ ಎಸ್ತೇರಳು
ಸಹ ಒಬ್ಬಳಾಗಿದ್ದಳು. ಎಸ್ತೇರಳನ್ನೂ ಅರಮನೆಗೆ ಕರೆದು
ಕೊಂಡು ಹೋಗಿ ಹೇಗೈಯ ವಶಕ್ಕೆ ಕೊಟ್ಟರು. 9ಹೇಗೈ
ಎಸ್ತೇರಳನ್ನು ಇಷ್ಟಪಟ್ಟನು. ಆಕೆ ಅವನ ಮೆಚ್ಚಿಗೆಗೆ
ಪಾತ್ರಳಾದಳು. ಆಕೆಗೆ ಅರಮನೆಯಿಂದ ಏಳು ಮಂದಿ
ಸೇವಕಿಯರನ್ನು ಕೊಟ್ಟು ಆಕೆಯ ಊಟೋಪಚಾರಗಳಲ್ಲಿ
ಮತ್ತು ಸೌಂದರ್ಯ ಅಭಿವೃದ್ಧಿಗಾಗಿ ಲೇಪನ ವಸ್ತುಗಳ
ವಿಷಯದಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದನು. ಇದಾದ
ಬಳಿಕ ಎಸ್ತೇರ್ ಮತ್ತು ಆಕೆಯ ಸೇವಕಿಯರಿಗೆ ಅಂತಃ
ಪುರದ ಉತ್ತಮ ಭಾಗದಲ್ಲಿ ಇಳಿದುಕೊಳ್ಳುವ ವ್ಯವಸ್ಥೆ
ಮಾಡಿದನು. 10ತಾನು ಯೆಹೂದ್ಯಳು ಎಂದು ಎಸ್ತೇರಳು
ಯಾರಿಗೂ ಹೇಳಲಿಲ್ಲ. ತನ್ನ ವಂಶ ಮತ್ತು ಮನೆತನಗಳ
ಬಗ್ಗೆ ಯಾರಿಗೂ ತಿಳಿಸಲಿಲ್ಲ. ಯಾಕೆಂದರೆ ಮೊರ್ದೆಕೈ
ಆಕೆಗೆ ತನ್ನ ವಿಷಯವಾಗಿ ಯಾರಿಗೂ ಹೇಳಬಾರದೆಂದೂ
ಕಟ್ಟಪ್ಪಣೆ ಮಾಡಿದ್ದನು. 11ಪ್ರತಿದಿನ ಮೊರ್ದೆಕೈ ಅಂತಃ
ಪುರದ ಎದುರಿನಿಂದ ಹೋಗುತ್ತಾ ಬರುತ್ತಾ ಎಸ್ತೇರಳು
ಹೇಗಿದ್ದಾಳೆಂದೂ ಅವಳಿಗೆ ಮುಂದೆ ಏನಾಗಬಹುದೆಂದೂ
ವಿಚಾರಿಸುತ್ತಿದ್ದನು.

12ಸರದಿಯ ಪ್ರಕಾರ ಒಬ್ಬ ಕನ್ಯೆಯನ್ನು ರಾಜನ ಬಳಿಗೆ
ಕರೆದೊಯ್ಯುವ ಮೊದಲು ಆಕೆಯು ಹನ್ನೆರಡು ತಿಂಗಳ
ಕಾಲ ಸೌಂದರ್ಯೋಪಾಸನದ ವಿಧಿಕ್ರಮಗಳನ್ನೆಲ್ಲಾ
ನೆರವೇರಿಸಿರಬೇಕು. ಆರುತಿಂಗಳ ಕಾಲ ರಕ್ತಬೋಳದ
ಎಣ್ಣೆಯ ಅಭ್ಯಂಜನದಿಂದಲೂ ನಂತರದ ಆರುತಿಂಗಳು
ಕಾಂತಿವರ್ಧಕ ಲೇಪನ ಮತ್ತು ಸುಗಂಧವಸ್ತುಗಳಿಂದ
ಆಕೆಯು ಸೌಂದರ್ಯದ ಆರೈಕೆ ಮಾಡಿಸಿಕೊಳ್ಳ
ಬೇಕಿತ್ತು. 13ರಾಜನ ಬಳಿಗೆ ಹೋಗುವಾಗ ಆಕೆಗೆ ಏನು
ಬೇಕೋ ಅದನ್ನು ಅಂತಃಪುರದಿಂದ ಕೊಡಲಾಗುತ್ತಿತ್ತು.
14ಮುಸ್ಸಂಜೆಯ ಸಮಯದಲ್ಲಿ ಕನ್ಯೆಯು ರಾಜನಿವಾಸ
ವನ್ನು ಪ್ರವೇಶಿಸುವಳು. ಮರುದಿನ ಮುಂಜಾನೆ ಆಕೆಯು
ಅಲ್ಲಿಂದ ಹಿಂತಿರುಗಿ ರಾಜನ ಉಪಪತ್ನಿಯರು ಉಳಿದು
ಕೊಳ್ಳುವ ಅಂತಃಪುರದ ಇನ್ನೊಂದು ಭಾಗದಲ್ಲಿ ನೆಲೆಸು
ವಳು. ಅಲ್ಲಿ ಆಕೆ ರಾಜನ ಕಂಚುಕಿ ಶವಷ್ಗಜನ ಮೇಲ್ವಿ

ಚಾರಣೆಯಲ್ಲಿರುವಳು. ಶವಷ್ಗಜನು ರಾಜನ ಉಪಪತ್ನಿ
ಗಳ ಮೇಲ್ವಿಚಾರಕನಾಗಿದ್ದನು. ರಾಜನು ಆಕೆಯ
ಹೆಸರೆತ್ತಿ ಕರೆದಾಗ ಮಾತ್ರವೇ ಆಕೆಯು ತಿರುಗಿ ರಾಜನ
ಬಳಿಗೆ ಹೋಗುವಳು. ಕರೆಯದಿದ್ದಲ್ಲಿ ಆಕೆಯು ಅಲ್ಲಿಯೇ
ಇರುವಳು.
15ರಾಜನ ಬಳಿಗೆ ಹೋಗಲು ಎಸ್ತೇರಳ ಸರದಿ
ಬಂದಾಗ ಆಕೆ ಏನನ್ನೂ ಕೇಳಿಕೊಳ್ಳಲಿಲ್ಲ. ತಾನು ಏನನ್ನು
ತೆಗೆದುಕೊಂಡು ಹೋಗಬೇಕೆಂದು ರಾಜನ ಸ್ತ್ರೀಯರ
ಮೇಲ್ವಿಚಾರಕನಾಗಿದ್ದ ರಾಜಕಂಚುಕಿ ಹೇಗ್ಯೆನನ್ನು
ಮಾತ್ರ ಕೇಳಿದಳು. (ಎಸ್ತೇರಳು ಮೊರ್ದೆಕೈಯ ಚಿಕ್ಕಪ್ಪ
ಅಭೀಹೈಲನ ಮಗಳೂ ಮೊರ್ದೆಕೈಯ ಸಾಕು ಮಗಳೂ
ಆಗಿದ್ದಳು.) ಎಸ್ತೇರಳನ್ನು ನೋಡಿದವರೆಲ್ಲರೂ ಆಕೆಯನ್ನು
ಮೆಚ್ಚುತ್ತಿದ್ದರು. 16ಹೀಗೆ ಹತ್ತನೇ ತಿಂಗಳಾದ ಟೆಬೇತ್
ಮಾಸದಲ್ಲಿ ರಾಜನ ಏಳನೇ ವರ್ಷದಲ್ಲಿ ಎಸ್ತೇರಳು
ಅಹಷ್ವೇರೋಷನ ರಾಜನಿವಾಸಕ್ಕೆ ಕರೆದೊಯ್ಯಲ್ಪಟ್ಟಳು.
17ಎಲ್ಲಾ ಕನ್ಯೆಯರಿಗಿಂತ ರಾಜನು ಎಸ್ತೇರಳನ್ನು
ಬಹಳವಾಗಿ ಪ್ರೀತಿಸಿದನು. ಆಕೆ ಅವನ ಮೆಚ್ಚಿಕೆಗೆ ಪಾತ್ರ
ಳಾದಳು. ಎಲ್ಲಾ ಕನ್ಯೆಯರಲ್ಲಿ ಅವಳನ್ನು ಮಾತ್ರ ರಾಜನು
ಹೆಚ್ಚಾಗಿ ಇಷ್ಟಪಟ್ಟನು. ರಾಜನಾದ ಅಹಷ್ವೇರೋಷನು
ರಾಜ ಕಿರೀಟವನ್ನು ಆಕೆಯ ತಲೆಯ ಮೇಲಿರಿಸಿ ವಷ್ಟಿಯ
ಬದಲಾಗಿ ಅವಳನ್ನು ತನ್ನ ರಾಣಿಯನ್ನಾಗಿ ಮಾಡಿದನು.
18ಎಸ್ತೇರಳಿಗೆ ರಾಜನು ಒಂದು ದೊಡ್ಡ ಔತಣ
ವನ್ನೇರ್ಪಡಿಸಿ ಅದಕ್ಕೆ ರಾಜ್ಯದ ಮುಖ್ಯಾಧಿಕಾರಿಗಳನ್ನೂ
ನಾಯಕರನ್ನೂ ಆಮಂತ್ರಿಸಿ, ರಾಜ್ಯದಲ್ಲೆಲ್ಲಾ ಒಂದು
ದಿನದ ರಜೆಯನ್ನು ಘೋಷಿಸಿದನು; ಜನರಿಗೆ ಉದಾರ
ವಾಗಿ ದಾನಧರ್ಮಗಳನ್ನು ಮಾಡಿದನು.

### ರಾಜಹತ್ಯೆಗೆ ಒಳಸಂಚು

19ಕನ್ಯೆಯರು ಎರಡನೆ ಸಲ ಸಭೆ ಸೇರಿದ್ದಾಗ
ಮೊರ್ದೆಕೈಯು ಅರಮನೆಯ ಹೆಬ್ಬಾಗಿಲಲ್ಲಿ ಕುಳಿತು
ಕೊಂಡಿದ್ದನು. 20ಮೊರ್ದೆಕೈ ಎಸ್ತೇರಳಿಗೆ ಹೇಳಿದ
ಮೇರೆಗೆ ಆಕೆ ತನ್ನ ಪೂರ್ವಿಕರ ದೇಶದ ಬಗ್ಗೆಯಾಗಲೀ
ತನ್ನ ಕುಟುಂಬದ ಹಿನ್ನಲೆಯ ಬಗ್ಗೆಯಾಗಲೀ ಯಾರಿಗೂ
ಹೇಳಲಿಲ್ಲ. ಹಿಂದೆ ಆಕೆ ಹೇಗೆ ಮೊರ್ದೆಕೈ ಹೇಳಿದ ಪ್ರಕಾರ
ನಡೆದುಕೊಳ್ಳುತ್ತಿದ್ದಳೋ ಹಾಗೆಯೇ ಈಗಲೂ ನಡೆದು
ಕೊಳ್ಳುತ್ತಿದ್ದಳು.
21ಮೊರ್ದೆಕೈ ಅರಮನೆಯ ಹೆಬ್ಬಾಗಿಲ ಬಳಿ ಕುಳಿತು
ಕೊಂಡಿದ್ದ ಸಮಯದಲ್ಲಿ ಒಂದು ವಿಷಯ ನಡೆಯಿತು.
ಬಿಗೆತಾನ್ ಮತ್ತು ತೆರೆಷ್ ಎಂಬ ಇಬ್ಬರು ದ್ವಾರ
ಪಾಲಕರು ರಾಜನ ಮೇಲೆ ಕೋಪಗೊಂಡು ಅವನನ್ನು
ಕೊಲ್ಲಲು ಒಳಸಂಚು ಮಾಡುತ್ತಿದ್ದರು. 22ಮೊರ್ದೆಕೈಗೆ
ಈ ವಿಷಯ ಗೊತ್ತಾದಾಗ ಅವನು ಅದನ್ನು ಎಸ್ತೇರ
ಳಿಗೆ ತಿಳಿಸಿದನು. ಎಸ್ತೇರ್ ರಾಣಿಯು ಇದನ್ನು ಕೊಡಲೇ
ರಾಜನಿಗೆ ತಿಳಿಸಿದಳು. ಅಷ್ಟೇ ಅಲ್ಲ, ಮೊರ್ದೆಕೈ ಎಂಬ
ವನು ಈ ಒಳಸಂಚನ್ನು ಕಂಡುಹಿಡಿದು ತನಗೆ ತಿಳಿಸಿ
ದನು ಎಂಬುದಾಗಿಯೂ ರಾಜನಿಗೆ ವರದಿ ಮಾಡಿದಳು.
23ಕೂಡಲೇ ವಿಚಾರಣೆ ನಡೆಸಿದಾಗ ಮೊರ್ದೆಕೈಯು
ಹೇಳಿದ ವಿಷಯವು ಸತ್ಯ ಎಂದು ಗೊತ್ತಾಯಿತು. ಆ
ಇಬ್ಬರು ದ್ವಾರಪಾಲಕರನ್ನು ಹಿಡಿದು ಗಲ್ಲಿಗೇರಿಸಿದರು.
ಈ ವಿಷಯಗಳು ರಾಜನ ಬಳಿಯಲ್ಲಿರುವ ರಾಜಕಾಲ
ವೃತ್ತಾಂತ ಪುಸ್ತಕದಲ್ಲಿ ಬರೆಯಲ್ಪಟ್ಟವು.

### ಹಾಮಾನನ ಸಂಚು

**3** 1ಇದಾದ ಬಳಿಕ ರಾಜನಾದ ಅಹಷ್ವೇರೋಷನು
ಹಾಮಾನನನ್ನು ಗೌರವಿಸಿದನು. ಹಾಮಾನನು
ಹಮ್ಮೆದಾತನೆಂಬವನ ಮಗನು. ಇವನು ಅಗಾಗನ
ವಂಶಕ್ಕೆ ಸೇರಿದವನಾಗಿದ್ದನು. ರಾಜನು ಹಾಮಾನನನ್ನು
ಉನ್ನತಸ್ಥಾನಕ್ಕೆ ನೇಮಿಸಿ ಬೇರೆ ಅಧಿಕಾರಿಗಳಿಗಿಂತ
ವಿಶೇಷವಾದ ಗೌರವವನ್ನು ಕೊಡಿಸಿದನು. 2ರಾಜ್ಯದ
ಎಲ್ಲಾ ಅಧಿಕಾರಿಗಳೂ ಅರಮನೆಯ ಹೆಬ್ಬಾಗಿಲ ಬಳಿಯ
ಲ್ಲಿದ್ದವರೆಲ್ಲರೂ ಅವನಿಗೆ ಅಡ್ಡಬೀಳುತ್ತಿದ್ದರು. ಇದು
ರಾಜಾಜ್ಞೆಯಾಗಿತ್ತು. ಆದರೆ ಮೊರ್ದೆಕೈ ಮಾತ್ರ ಅವನಿಗೆ
ಅಡ್ಡಬೀಳಲೂ ಇಲ್ಲ ಗೌರವಿಸಲೂ ಇಲ್ಲ. 3ಅರಮನೆಯ
ಹೆಬ್ಬಾಗಿಲ ಬಳಿಯಲ್ಲಿದ್ದ ಅಧಿಕಾರಿಗಳು, “ಮೊರ್ದೆಕೈ,
ರಾಜನು ಆಜ್ಞಾಪಿಸಿದ್ದರೂ ನೀನು ಹಾಮಾನನಿಗೆ ಯಾಕೆ
ಬಗ್ಗಿ ನಮಸ್ಕರಿಸುವುದಿಲ್ಲ?” ಎಂದು ಪ್ರಶ್ನಿಸಿದರು.
4ಪ್ರತಿದಿನ ಆ ಅಧಿಕಾರಿಗಳು ಮೊರ್ದೆಕೈಗೆ ಹೇಳಿದರೂ
ಅವನು ಹಾಮಾನನಿಗೆ ಅಡ್ಡಬೀಳಲೂ ಇಲ್ಲ, ಗೌರವಿಸಲೂ
ಇಲ್ಲ. ಈ ವಿಷಯವನ್ನು ಅಧಿಕಾರಿಗಳು ಹಾಮಾನನಿಗೆ
ತಿಳಿಸಿದರು. ಮೊರ್ದೆಕೈಗೆ ಹಾಮಾನನು ಮಾಡುವುದನ್ನು
ನೋಡಲು ಅವರು ಕಾದಿದ್ದರು. ಮೊರ್ದೆಕೈ ಅವರಿಗೆ
ತಾನು ಯೆಹೂದ್ಯನೆಂದು ತಿಳಿಸಿದ್ದನು. 5ಮೊರ್ದೆಕೈ
ತನಗೆ ಅಡ್ಡಬೀಳದಿರುವುದರಿಂದ ಮತ್ತು ಗೌರವಿಸ
ದಿರುವುದರಿಂದ ಹಾಮಾನನು ಬಹಳ ಕೋಪಗೊಂಡನು.
6ಮೊರ್ದೆಕೈ ಯೆಹೂದ್ಯ ಜನಾಂಗಕ್ಕೆ ಸೇರಿದವ
ನೆಂದು ಹಾಮಾನನಿಗೆ ತಿಳಿದುಬಂತು. ಅವನು ಕೇವಲ
ಮೊರ್ದೆಕೈಯನ್ನು ಮಾತ್ರವೇ ಕೊಲ್ಲದೆ ಅಹಷ್ವೇರೋಷನ
ಸಾಮ್ರಾಜ್ಯದಲ್ಲಿರುವ ಎಲ್ಲಾ ಯೆಹೂದ್ಯರನ್ನು ಕೊಲ್ಲುವ
ಉಪಾಯವನ್ನು ಹೂಡಿದನು.
7ಅಹಷ್ವೇರೋಷನ ಆಳ್ವಿಕೆಯ ಹನ್ನೆರಡನೆಯ ವರ್ಷದ
ಮೊದಲನೆ ತಿಂಗಳಾದ ನೀಸಾನ್ ತಿಂಗಳಲ್ಲಿ ಒಂದು
ನಿರ್ದಿಷ್ಟ ದಿನಕ್ಕಾಗಿ ಹಾಮಾನನು ಚೀಟು ಹಾಕಿದನು.
ಆಗ ಹನ್ನೆರಡನೆ ತಿಂಗಳಾದ ಅದಾರ್ ಮಾಸವು ಆರಿಸ
ಲ್ಪಟ್ಟಿತು. (ಆ ದಿನಗಳಲ್ಲಿ ಚೀಟು ಹಾಕುವದಕ್ಕೆ “ಪೂರ್”
ಎಂದು ಅನ್ನುತ್ತಿದ್ದರು.) 8ಹಾಮಾನನು ರಾಜನಾದ
ಅಹಷ್ವೇರೋಷನ ಬಳಿಗೆ ಬಂದು, “ರಾಜನೇ, ನಿನ್ನ
ಸಾಮ್ರಾಜ್ಯದ ಎಲ್ಲಾ ಸಂಸ್ಥಾನಗಳಲ್ಲಿ ಒಂದು ಜನಾಂಗ
ದವರು ಹಬ್ಬಿರುತ್ತಾರೆ. ಇವರು ಇತರ ಎಲ್ಲಾ ಜನರಿಂದ
ಪ್ರತ್ಯೇಕವಾಗಿ ಇರುತ್ತಾರೆ. ಅವರ ನೀತಿರೀತಿಗಳೆಲ್ಲಾ
ಬೇರೆ ಜನರಿಗಿಂತ ವಿಭಿನ್ನವಾಗಿರುತ್ತದೆ. ಅವರು ರಾಜನ
ಕಟ್ಟಳೆಗೆ ವಿಧೇಯರಾಗುವುದಿಲ್ಲ. ನಿನ್ನ ರಾಜ್ಯದಲ್ಲಿ ಅವರು
ಹೀಗೆಯೇ ಇರುವುದು ಒಳ್ಳೆಯದಲ್ಲ.

9“ರಾಜನೇ, ನೀನು ಸಮ್ಮತಿಸುವುದಾದರೆ ನನ್ನ
ಸಲಹೆ ಏನೆಂದರೆ, ಆ ಜನರನ್ನು ನಿರ್ಮೂಲ ಮಾಡಲು
ಅಪ್ಪಣೆ ಕೊಡು. ನಾನು ಹತ್ತು ಸಾವಿರ ಬೆಳ್ಳಿನಾಣ್ಯಗಳನ್ನು
ರಾಜಖಜಾನೆಯಲ್ಲಿ ಹಾಕುವೆನು. ಆ ಹಣವನ್ನು ಆ
ಕಾರ್ಯ ಮಾಡುವ ಜನರ ಸಂಬಳಕ್ಕಾಗಿ ವಿನಿಯೋಗಿಸ
ಬಹುದು” ಎಂದು ಹೇಳಿದನು.

10ಆಗ ರಾಜನು ತನ್ನ ಮುದ್ರೆಯುಂಗುರವನ್ನು ಬೆರಳಿ
ನಿಂದ ತೆಗೆದು ಹಾಮಾನನಿಗೆ ಕೊಟ್ಟನು. ಹಾಮಾನನು
ಅಗಾಗನ ವಂಶದವನಾದ ಹಮ್ಮೆದಾತನ ಮಗನು.
ಈ ಹಾಮಾನನು ಯೆಹೂದ್ಯರ ಕಡುವೈರಿಯಾಗಿದ್ದನು.
11ರಾಜನು ಹಾಮಾನನಿಗೆ, “ನಿನ್ನ ಹಣವು ನಿನ್ನಲ್ಲಿ ಇರಲಿ.
ಆ ಜನರಿಗೆ ನಿನ್ನ ಇಷ್ಟದಂತೆ ಏನುಬೇಕಾದರೂ ಮಾಡು”
ಅಂದನು.

12ಮೊದಲನೆ ತಿಂಗಳಿನ ಹದಿಮೂರನೇ ದಿನದಂದು
ರಾಜಲೇಖಕರನ್ನು ಕರೆಸಿ ಹಾಮಾನನ ಆಜ್ಞೆಯನ್ನು
ಆಯಾಭಾಷೆಗಳಲ್ಲಿ ಬರೆಸಿದನು. ರಾಜನ ಸಂಸ್ಥಾನಾಧಿ
ಕಾರಿಗಳಿಗೆ, ರಾಜ್ಯಪಾಲರಿಗೆ ಮತ್ತು ವಿವಿಧ ಜನಾಂಗದ
ಅಧಿಕಾರಿಗಳಿಗೆ ರಾಜನಾದ ಅಹಷ್ವೇರೋಷನ ಹೆಸರಿನಲ್ಲಿ
ಬರೆದು ಅದಕ್ಕೆ ರಾಜನ ಮುದ್ರೆಯನ್ನು ಒತ್ತಲಾಯಿತು.

13ರಾಜಾಜ್ಞೆಯನ್ನು ಸಂದೇಶವಾಹಕರು ದೇಶದ ಎಲ್ಲಾ
ಕಡೆಗಳಿಗೆ ಕೊಂಡೊಯ್ದರು. ಆ ಪತ್ರದಲ್ಲಿ ಹನ್ನೆರಡನೇ
ತಿಂಗಳಿನ ಹದಿಮೂರನೇ ದಿನದಂದು ಆಯಾ ಪ್ರಾಂತ್ಯ
ಗಳಲ್ಲಿರುವ ಎಲ್ಲಾ ಯೆಹೂದ್ಯರನ್ನು ಚಿಕ್ಕವರು ದೊಡ್ಡವರು
ಎನ್ನದೆ ಕೊಂದು ಅವರ ವಸ್ತುಗಳನ್ನೆಲ್ಲ ಸೂರೆ ಮಾಡ
ಬೇಕೆಂಬುದಾಗಿ ಬರೆದಿತ್ತು.

14ಈ ಪತ್ರದ ಒಂದೊಂದು ಪ್ರತಿಯು ಪ್ರತಿಯೊಂದು
ಸಂಸ್ಥಾನದಲ್ಲಿ ರಾಜವಿಧಿಯೆಂದು ಎಲ್ಲಾ ಜನರಲ್ಲಿ
ಪ್ರಕಟಿಸಲ್ಪಡಬೇಕು. ಅಲ್ಲದೆ ಆ ದಿನಕ್ಕಾಗಿ ಎಲ್ಲಾ ಜನರೂ
ಸಿದ್ಧರಾಗಿರಬೇಕು ಎಂಬುದಾಗಿ ಬರೆದಿತ್ತು. 15ರಾಜನ
ಆಜ್ಞೆಯ ಪ್ರಕಾರ ಸಂದೇಶವಾಹಕರು ದೇಶದೇಶ
ಗಳಿಗೆ ಚದರಿದರು. ರಾಜಧಾನಿಯಾದ ಶೂಷನ್ ನಗರ
ದಲ್ಲೂ ಆ ಸಂದೇಶವನ್ನು ಪ್ರಕಟಿಸಲಾಯಿತು. ರಾಜನೂ
ಹಾಮಾನನೂ ಮದ್ಯಪಾನ ಮಾಡಲು ಕುಳಿತರು. ಆದರೆ
ರಾಜಧಾನಿಯಲ್ಲಿನ ಜನರು ಗಲಿಬಿಲಿಗೊಂಡಿದ್ದರು.

### ಎಸ್ತೇರಳಿಗೆ ಮೊರ್ದೆಕೈಯ ಒತ್ತಾಯ

**4** 1ನಡೆದ ಎಲ್ಲಾ ಸಂಗತಿಗಳನ್ನು ಮೊರ್ದೆಕೈ ತಿಳಿದು
ಕೊಂಡನು. ಯೆಹೂದ್ಯರನ್ನೆಲ್ಲಾ ಕೊಲ್ಲಲು
ರಾಜಾಜ್ಞೆ ಹೊರಟಿದೆ ಎಂದು ಕೇಳಿದಾಗ ಅವನು
ತನ್ನ ಬಟ್ಟೆಗಳನ್ನು ಹರಿದುಕೊಂಡು ಶೋಕದ ಬಟ್ಟೆ
ಗಳನ್ನು ಧರಿಸಿ ತಲೆಯ ಮೇಲೆ ಬೂದಿಯನ್ನು ಸುರಿದು
ಕೊಂಡನು. ಆಮೇಲೆ ಗಟ್ಟಿಯಾಗಿ ಅಳುತ್ತಾ ನಗರ
ಬೀದಿಗಳಲ್ಲಿ ನಡೆದನು. 2ಅವನು ಶೋಕವಸ್ತ್ರಗಳನ್ನು
ಧರಿಸಿದ್ದ ಕಾರಣ ಅರಮನೆಯ ಹೆಬ್ಬಾಗಿಲ ತನಕ
ಮಾತ್ರವೇ ಅವನಿಗೆ ಹೋಗಲು ಸಾಧ್ಯವಾಯಿತು. ಅರ
ಮನೆಯ ಪ್ರಾಕಾರದೊಳಗೆ ಶೋಕವಸ್ತ್ರವನ್ನು ಧರಿಸಿ
ಯಾರೂ ಹೋಗುವಂತಿಲ್ಲ. 3ಪ್ರತಿಯೊಂದು ಸಂಸ್ಥಾನ
ದಲ್ಲೂ ರಾಜಾಜ್ಞೆ ಪ್ರಕಟಿಸಲ್ಪಟ್ಟಾಗ ಯೆಹೂದ್ಯರೊಳಗೆ
ಕೂಗಾಟವೂ ದುಃಖವೂ ತುಂಬಿತು. ಉಪವಾಸ
ಮಾಡುತ್ತಾ ಅವರು ಗಟ್ಟಿಯಾಗಿ ರೋಧಿಸಿದರು. ಎಷ್ಟೋ
ಮಂದಿ ಯೆಹೂದ್ಯರು ಶೋಕವಸ್ತ್ರವನ್ನು ಧರಿಸಿ ತಲೆಗೆ
ಬೂದಿ ಸುರಿದು ನೆಲದ ಮೇಲೆ ಬಿದ್ದುಕೊಂಡು ಗಟ್ಟಿಯಾಗಿ
ಅತ್ತರು.

4ಎಸ್ತೇರಳ ಸೇವಕಿಯರು ಮತ್ತು ಕಂಚುಕಿಯರು
ಮೊರ್ದೆಕೈ ವಿಚಾರವಾಗಿ ಆಕೆಗೆ ತಿಳಿಸಿದರು. ಇದನ್ನು
ಕೇಳಿ ಎಸ್ತೇರ್ ರಾಣಿಗೆ ತುಂಬಾ ಗಲಿಬಿಲಿಯೂ ದುಃಖವೂ
ಆಯಿತು. ಆಕೆ ಅವನಿಗೋಸ್ಕರ ಬಟ್ಟೆಗಳನ್ನು ಕಳುಹಿಸಿ
ಶೋಕದ ಬಟ್ಟೆಯನ್ನು ತೆಗೆದುಹಾಕಲು ಹೇಳಿಸಿದಳು.
ಆದರೆ ಅವನು ಅವಳ ಬಟ್ಟೆಗಳನ್ನು ಸ್ವೀಕರಿಸಲಿಲ್ಲ.
5ಆಗ ಎಸ್ತೇರಳು ಹತಾಕನನ್ನು ಕರೆಸಿದಳು. ಹತಾಕನು
ರಾಜಕಂಚುಕಿಯಾಗಿದ್ದು ಎಸ್ತೇರ್ ರಾಣಿಯ ಸೇವೆಯನ್ನು
ಮಾಡುವವನಾಗಿದ್ದನು. ಮೊರ್ದೆಕೈಗೆ ಆಗಿರುವ ತೊಂದರೆ
ಯನ್ನೂ ಅವನು ದುಃಖತಪ್ತನಾಗಿರುವುದಕ್ಕೆ ಕಾರಣವನ್ನೂ
ವಿಚಾರಿಸಿಕೊಂಡು ಬರಲು ಅವನಿಗೆ ಆಜ್ಞಾಪಿಸಿದಳು.
6ಅರಮನೆಯ ಹೆಬ್ಬಾಗಿಲಿನ ಎದುರಿನಲ್ಲಿದ್ದ ಬಯಲಿನಲ್ಲಿ
ಮೊರ್ದೆಕೈಯನ್ನು ಹತಾಕನು ಸಂಧಿಸಿದಾಗ 7ಮೊರ್ದೆಕೈ
ನಡೆದ ಸಂಗತಿಗಳನ್ನೆಲ್ಲಾ ಹೇಳಿದನು. ಯೆಹೂದ್ಯರನ್ನು
ಕೊಲ್ಲಿಸಲು ಆಜ್ಞೆ ಹೊರಡಿಸಿದ್ದುದಕ್ಕಾಗಿ ಹಾಮಾನನು
ರಾಜನಿಗೆ ಕೊಟ್ಟ ಹಣದ ಸರಿಯಾದ ಮೊತ್ತವನ್ನು ತಿಳಿಸಿ
ದನು. 8ಯೆಹೂದ್ಯರನ್ನು ಕೊಲ್ಲಬೇಕೆಂಬ ರಾಜನ ಆಜ್ಞಾ
ಪತ್ರದ ಒಂದು ಪ್ರತಿಯನ್ನು ಹತಾಕನ ಕೈಯಲ್ಲಿ ಮೊರ್ದೆಕೈ
ಕೊಟ್ಟನು. ಈ ಆಜ್ಞಾಪತ್ರವು ಶೂಷನ್ ನಗರದ
ಎಲ್ಲೆಡೆಯಲ್ಲಿಯೂ ಕಳುಹಿಸಲ್ಪಟ್ಟಿತ್ತು. ಹತಾಕನು ಆ
ಪ್ರತಿಯನ್ನು ಎಸ್ತೇರಳಿಗೆ ತೋರಿಸಿ ಎಲ್ಲವನ್ನು ವಿವರಿಸ
ಬೇಕೆಂಬುದು ಮೊರ್ದೆಕೈಯ ಉದ್ದೇಶವಾಗಿತ್ತು. ಅಲ್ಲದೆ
ಎಸ್ತೇರ್ ರಾಣಿಯು ರಾಜನ ಬಳಿಗೆ ಹೋಗಿ ತನಗೂ
ಆಕೆಯ ಜನರಿಗೂ ದಯೆತೋರಲು ರಾಜನನ್ನು
ಬೇಡಿಕೊಳ್ಳಬೇಕೆಂದು ತಿಳಿಸಲು ಹತಾಕನ ಮೂಲಕ
ಹೇಳಿ ಕಳುಹಿಸಿದನು.

9ಹತಾಕನು ಹಿಂತಿರುಗಿ ಹೋಗಿ ಎಸ್ತೇರಳಿಗೆ ಮೊರ್ದೆಕೈ
ಹೇಳಿದ್ದೆಲ್ಲವನ್ನು ತಿಳಿಸಿದನು.

10ಎಸ್ತೇರಳು ಹತಾಕನಿಗೆ, “ಮೊರ್ದೆಕೈ ಬಳಿಗೆ ಹೋಗಿ
ಹೀಗೆ ಹೇಳು: 11ಮೊರ್ದೆಕೈ, ಸಾಮ್ರಾಜ್ಯದಲ್ಲಿರುವ ಎಲ್ಲಾ
ಅಧಿಕಾರಿಗಳಿಗೂ ಪ್ರಜೆಗಳಿಗೂ ತಿಳಿದಿರುವ ಒಂದು
ವಿಷಯವೇನೆಂದರೆ, ರಾಜನು ಕರೆಯದೆ ಯಾರಾದರೂ
ಆತನ ಬಳಿಗೆ ಹೋದರೆ ಅದಕ್ಕೆ ಮರಣದಂಡನೆಯೇ ಶಿಕ್ಷೆ.
ರಾಜನು ತನ್ನ ಬಂಗಾರದ ದಂಡವನ್ನು ಯಾರಿಗೆ ತೋರು
ವನೋ ಅವನು ಮರಣಶಿಕ್ಷೆಯಿಂದ ಪಾರಾಗುವನು. ಈಗ
ರಾಜನು ನನ್ನನ್ನು ಕರೆದು ಮೂವತ್ತು ದಿನಗಳಾದವು.”

12–13ಎಸ್ತೇರಳ ಸಂದೇಶವು ಮೊರ್ದೆಕೈಗೆ ತಲುಪಿತು.
ಅದಕ್ಕುತ್ತರವಾಗಿ ಮೊರ್ದೆಕೈ ಹೀಗೆ ಹೇಳಿ ಕಳುಹಿಸಿದನು:
“ಎಸ್ತೇರಳೇ, ನೀನು ಅರಮನೆಯಲ್ಲಿ ವಾಸವಾಗಿರು

ವುದರಿಂದ ಯೆಹೂದ್ಯಳಾದ ನೀನೊಬ್ಬಳೇ ಸಾಮೂಹಿಕ
ಹತ್ಯೆಯಿಂದ ಪಾರಾಗುವೆ ಎಂದು ನೆನೆಸಬೇಡ. 14ನೀನು
ಈಗ ಸುಮ್ಮನಿದ್ದರೆ ಯೆಹೂದ್ಯರಿಗೆ ಸಹಾಯವೂ
ಸ್ವಾತಂತ್ರ್ಯವೂ ಬೇರೆ ದಿಕ್ಕಿನಿಂದ ಬರುತ್ತವೆ. ಆದರೆ
ನೀನೂ ನಿನ್ನ ತಂದೆಯ ಬಳಗದವರೆಲ್ಲರೂ ಸಾಯುವಿರಿ.
ನೀನು ರಾಣಿಯಾಗಿ ಆಯ್ಕೆಯಾದದ್ದು ಇಂಥ ಸಮಯ
ಕ್ಕೋಸ್ಕರವೇ ಇರಬೇಕು."

15–16ಆಗ ಎಸ್ತೇರಳು ಈ ಉತ್ತರವನ್ನು ಮೊರ್ದೆಕೈಗೆ
ಕಳುಹಿಸಿದಳು: "ಮೊರ್ದೆಕೈ, ನೀನು ಹೋಗಿ
ಶೂಷನ್‌ನಲ್ಲಿರುವ ಎಲ್ಲಾ ಯೆಹೂದ್ಯರನ್ನು ಒಟ್ಟಿಗೆ
ಸೇರಿಸಿ ನನಗಾಗಿ ಉಪವಾಸವಿರಲು ಅವರಿಗೆ ಹೇಳು.
ಮೂರು ದಿನ ಹಗಲುರಾತ್ರಿ ಊಟಮಾಡಲೂಬಾರದು
ಕುಡಿಯಲೂಬಾರದು. ನಾನೂ ನಿಮ್ಮ ಹಾಗೆ ಉಪವಾಸ
ದಿಂದಿರುವೆನು. ನನ್ನೊಂದಿಗೆ ನನ್ನ ಸೇವಕಿಯರೂ
ಉಪವಾಸ ಮಾಡುವರು. ನಾವು ಉಪವಾಸ ಮಾಡಿದ
ಬಳಿಕ ನಾನು ರಾಜನ ಬಳಿಗೆ ಹೋಗುವೆನು. ಆತನು
ಕರೆಯದೆ ನಾನು ಆತನ ಬಳಿಗೆ ಹೋಗುವುದು ನ್ಯಾಯ
ಬಾಹಿರ. ಆದರೂ ನಾನು ಹೋಗುವೆನು, ನಾನು ಸಾಯ
ಬೇಕಾದರೆ ಸಾಯುವೆನು."

17ಮೊರ್ದೆಕೈ ಹೊರಟುಹೋಗಿ ಎಸ್ತೇರಳು ಹೇಳಿದ
ಪ್ರಕಾರ ಮಾಡಿದನು.

### ರಾಜನಿಗೆ ಎಸ್ತೇರಳ ಬೇಡಿಕೆ

5 1ಮೂರನೇ ದಿನದಲ್ಲಿ ಎಸ್ತೇರಳು ವಿಶೇಷ ಬಟ್ಟೆ
ಗಳನ್ನು ಧರಿಸಿ ರಾಜನ ಅರಮನೆಯ ಒಳಾಂಗಣ
ದಲ್ಲಿ ನಿಂತುಕೊಂಡಳು. ಅದು ರಾಜ ದರ್ಬಾರಿನ ಮುಂದೆ
ಇತ್ತು. ರಾಜನು ಸಿಂಹಾಸನದ ಮೇಲೆ, ಪ್ರಜೆಗಳು ಪ್ರವೇಶಿ
ಸುವ ಬಾಗಿಲಿಗೆ ಎದುರಾಗಿ ಕುಳಿತಿದ್ದನು. 2ರಾಜನು
ಒಳಾಂಗಣದಲ್ಲಿ ನಿಂತಿದ್ದ ಎಸ್ತೇರಳನ್ನು ಕಂಡ ಕೂಡಲೇ
ಆಕೆಯನ್ನು ಮೆಚ್ಚಿಕೊಂಡು ತನ್ನ ಕೈಯಲ್ಲಿದ್ದ ರಾಜದಂಡ
ವನ್ನು ಆಕೆಯ ಕಡೆಗೆ ಚಾಚಿದನು. ಆಗ ಎಸ್ತೇರಳು
ಒಳಾಂಗಣವನ್ನು ಪ್ರವೇಶಿಸಿ ರಾಜನ ಬಳಿ ಹೋದಳು
ಮತ್ತು ರಾಜದಂಡದ ತುದಿಯನ್ನು ತನ್ನ ಬೆರಳಿನಿಂದ
ಮುಟ್ಟಿದಳು.

3"ಎಸ್ತೇರ್ ರಾಣಿಯೇ, ಯಾವುದು ನಿನ್ನ ಮನಸ್ಸನ್ನು
ಬಾಧಿಸುತ್ತಿದೆ? ಏನು ಕೇಳಲು ಬಂದಿರುವೆ? ಕೇಳು,
ನೀನು ಅರ್ಧ ರಾಜ್ಯವನ್ನು ಕೇಳಿದರೂ ಕೊಡುವೆನು"
ಎಂದು ರಾಜನು ಅಂದನು.

4ಅದಕ್ಕೆ ಎಸ್ತೇರಳು, "ನಾನು ಒಂದು ಔತಣವನ್ನು
ಸಿದ್ಧಪಡಿಸಿರುತ್ತೇನೆ. ಅದಕ್ಕೆ ನೀವೂ, ಹಾಮಾನನೂ
ಬರಬೇಕು ಎಂದು ವಿನಂತಿಸುತ್ತೇನೆ" ಎಂದಳು.

5ಆಗ ರಾಜನು, "ಹಾಮಾನನನ್ನು ಬೇಗನೇ ಕರೆಸಿರಿ,
ಎಸ್ತೇರಳು ಹೇಳಿದಂತೆಯೇ ಆಗಲಿ" ಅಂದನು.

ಅಂತೆಯೇ ರಾಜನೂ ಹಾಮಾನನೂ ಎಸ್ತೇರಳು
ಅವರಿಗಾಗಿ ಮಾಡಿದ ಔತಣಕ್ಕೆ ಹೋದರು. 6ಅವರು
ದ್ರಾಕ್ಷಾರಸವನ್ನು ಸೇವಿಸುತ್ತಿರುವಾಗ ರಾಜನು ಮತ್ತೆ
ಎಸ್ತೇರಳಿಗೆ, "ನೀನು ನನ್ನನ್ನು ಏನು ಕೇಳಬೇಕೆಂದಿರುವೆ?
ಏನೂ ಬೇಕಾದರೂ ಕೇಳು. ನಾನು ಕೊಡುತ್ತೇನೆ. ಹೇಳು
ನಿನಗೇನುಬೇಕು? ನನ್ನ ಅರ್ಧ ರಾಜ್ಯವನ್ನು ಕೇಳಿದರೂ
ನಾನು ಕೊಡುತ್ತೇನೆ" ಅಂದನು.

7ಅದಕ್ಕೆ ಎಸ್ತೇರಳು, "ನನ್ನ ಬಿನ್ನಹವೇನೆಂದರೆ:
8ರಾಜನು ಸಮ್ಮತಿಸುವುದಾದರೆ ಮತ್ತು ನಾನು
ಕೇಳಿಕೊಳ್ಳುವುದನ್ನು ಕೊಡಲು ರಾಜನಿಗೆ ಇಷ್ಟವಾದರೆ,
ನಾಳೆ ನಾನು ಇನ್ನೊಂದು ಔತಣ ಸಮಾರಂಭವನ್ನು
ಏರ್ಪಡಿಸುತ್ತೇನೆ. ಅದಕ್ಕೆ ನೀವೂ ಹಾಮಾನನೂ
ಬರಬೇಕು. ಆಗ ನಾನು ನನಗೇನುಬೇಕೆಂದು ತಿಳಿಸು
ವೆನು" ಅಂದಳು.

### ಮೊರ್ದೆಕೈ ಮೇಲೆ ಹಾಮಾನನ ರೋಷ

9ಹಾಮಾನನು ಹರ್ಷಭರಿತನಾಗಿ ರಾಜ ಸನ್ನಿಧಿ
ಯಿಂದ ತನ್ನ ಮನೆಗೆ ತೆರಳಿದನು. ಆದರೆ ಹೆಬ್ಬಾಗಿಲ
ಬಳಿಯಲ್ಲಿ ಮೊರ್ದೆಕೈಯನ್ನು ನೋಡಿದಾಗ ಅವನ ಮೇಲೆ
ಹಾಮಾನನಿಗೆ ಕೋಪ ಉಕ್ಕಿಬಂತು. ಯಾಕೆಂದರೆ
ಮೊರ್ದೆಕೈಯು ಹಾಮಾನನಿಗೆ ಯಾವ ಗೌರವವನ್ನೂ
ಕೊಟ್ಟಿರಲಿಲ್ಲ ಮತ್ತು ಅವನಿಗೆ ಭಯಪಡಲಿಲ್ಲ. ಇದು
ಹಾಮಾನನನ್ನು ಸಿಟ್ಟಿಗೇರುವಂತೆ ಮಾಡಿತು. 10ಆದರೆ
ಹಾಮಾನನು ತನ್ನ ಕೋಪವನ್ನು ಹಿಡಿತದಲ್ಲಿಟ್ಟುಕೊಂಡು
ತನ್ನ ಮನೆಗೆ ಹೋದನು. ಅಲ್ಲಿ ತನ್ನ ಸ್ನೇಹಿತರನ್ನೂ ತನ್ನ
ಹೆಂಡತಿಯಾದ ಜೆರೆಷಳನ್ನೂ ಕರೆದು 11ತನ್ನ ಸಂಪ
ತ್ತಿನ ಬಗ್ಗೆ ಕೊಚ್ಚಿಗೊಂಡನು. ತನ್ನ ಸ್ನೇಹಿತರೊಡನೆ
ತನ್ನ ಮಕ್ಕಳ ವಿಚಾರವಾಗಿ ಹೆಗ್ಗಳಿಕೆಯಿಂದ ಮಾತಾಡು
ತ್ತಿದ್ದನು. ಮಾತ್ರವಲ್ಲದೆ ರಾಜನು ತನ್ನನ್ನು ಅತ್ಯುನ್ನತ
ಸ್ಥಾನಕ್ಕೆ ಏರಿಸಿ ಇತರ ಎಲ್ಲಾ ನಾಯಕರುಗಳ ಮೇಲೆ
ನೇಮಿಸಿದನು ಎಂದು ಹೆಮ್ಮೆಪಟ್ಟನು.

12ಹಾಮಾನನು ತನ್ನ ಮಾತನ್ನು ಮುಂದುವರಿಸಿ, "ಅಷ್ಟೇ
ಅಲ್ಲ. ಎಸ್ತೇರ್ ರಾಣಿಯು ರಾಜನೊಡನೆ ನನ್ನೊಬ್ಬನನ್ನೇ
ಕರೆದು ಔತಣ ಮಾಡಿಸಿದಳು. ನಾಳೆಯ ಔತಣ ಸಮಾ
ರಂಭಕ್ಕೂ ರಾಜನೊಡನೆ ನನ್ನನ್ನು ತಿರಿಗಿ ಬರಲು
ಆಮಂತ್ರಿಸಿರುತ್ತಾಳೆ. 13ಆದರೆ ನಾನು ಹೆಬ್ಬಾಗಿಲ
ಬಳಿಯಲ್ಲಿ ಕುಳಿತುಕೊಳ್ಳುತ್ತಿರುವ ಮೊರ್ದೆಕೈಯನ್ನು
ನೋಡುವಾಗ ನನ್ನ ಸಂತೋಷವೆಲ್ಲವೂ ಮಾಯ
ವಾಗುತ್ತದೆ" ಎಂದು ಹೇಳಿದನು.

14ಇದನ್ನು ಕೇಳಿದ ಹಾಮಾನನ ಹೆಂಡತಿ ಜೆರೆಷಳೂ
ಮತ್ತು ಅವನ ಮಿತ್ರವೃಂದದವರೂ ಅವನಿಗೆ ಈ ಸಲಹೆ
ಕೊಟ್ಟರು: "ಒಂದು ಗಲ್ಲುಮರವನ್ನು ನೆಡಿಸು. ಅದು
ಎಪ್ಪತ್ತೈದು ಅಡಿ ಎತ್ತರವಿರಲಿ. ನಾಳೆ ಮುಂಜಾನೆ
ಮೊರ್ದೆಕೈಯನ್ನು ಗಲ್ಲಿಗೇರಿಸಲು ರಾಜನಿಂದ ಅಪ್ಪಣೆ
ತೆಗೆದುಕೋ. ಅನಂತರ ರಾಜನೊಂದಿಗೆ ಔತಣ
ಸಮಾರಂಭಕ್ಕೆ ಹೋಗಿ ಸಂತೋಷಪಡು."

ಇದನ್ನು ಕೇಳಿ ಹಾಮಾನನು ಸಂತೋಷಗೊಂಡನು.
ಕೂಡಲೇ ಸೇವಕನನ್ನು ಕರೆಸಿ ಗಲ್ಲುಮರವನ್ನು ಸಿದ್ಧ
ಮಾಡಲು ಆಜ್ಞಾಪಿಸಿದನು.

### ಮೊರ್ದೆಕೈಗೆ ಸನ್ಮಾನ

**6** 1ಆ ರಾತ್ರಿ ರಾಜನಿಗೆ ನಿದ್ರಿಸಲಾಗಲಿಲ್ಲ. ಒಬ್ಬ ಸೇವಕ
ನನ್ನು ಕರೆದು ರಾಜಕಾಲವೃತ್ತಾಂತ ಪುಸ್ತಕವನ್ನು
ತರಹೇಳಿ ಅವನಿಂದ ಅದನ್ನು ಓದಿಸಿದನು. (ಈ ಪುಸ್ತಕ
ದಲ್ಲಿ ರಾಜರ ರಾಜ್ಯಾಳ್ವಿಕೆಯಲ್ಲಿ ನಡೆದ ಘಟನೆಗಳು ಲಿಖಿತ
ವಾಗಿರುತ್ತದೆ.) 2ಆ ಸೇವಕನು ರಾಜನಿಗೆ ಪುಸ್ತಕದಿಂದ
ಓದುತ್ತಾ ಹೋದನು. ರಾಜನನ್ನು ಕೊಲ್ಲುವ ಒಳಸಂಚಿನ
ವಿಚಾರವನ್ನೂ ಅದರಲ್ಲಿ ಬರೆದಿತ್ತು. ಬಿಗೆತಾನ್ ಮತ್ತು ತೆರೆಷ್
ಎಂಬ ಇಬ್ಬರು ದ್ವಾರಪಾಲಕರು ರಾಜನನ್ನು ಕೊಲ್ಲಲು
ಒಳಸಂಚು ಮಾಡುವುದನ್ನು ಕೇಳಿಸಿಕೊಂಡ ಮೊರ್ದೆಕೈ
ಅದನ್ನು ಬಹಿರಂಗಪಡಿಸಿದ್ದನ್ನೂ ಅದರಲ್ಲಿ ಬರೆದಿತ್ತು.

3ಇದನ್ನು ಕೇಳುತ್ತಿದ್ದ ರಾಜನು, "ಮೊರ್ದೆಕೈ ಹೀಗೆ
ಮಾಡಿದ್ದಕ್ಕೆ ಯಾವ ಗೌರವ ಮತ್ತು ಬಹುಮಾನಗಳು
ಕೊಡಲ್ಪಟ್ಟವು?" ಎಂದು ವಿಚಾರಿಸಿದನು. "ಮೊರ್ದೆಕೈಗೆ
ಏನೂ ಕೊಡಲಿಲ್ಲ" ಎಂದು ಸೇವಕರು ಉತ್ತರಿಸಿದರು.

4ಅದೇ ಸಮಯದಲ್ಲಿ ಹಾಮಾನನು ಹೊರಾಂಗಣ
ದಲ್ಲಿದ್ದನು. ಅವನು ತಾನು ತಯಾರಿಸಿಟ್ಟಿರುವ ಗಲ್ಲು
ಕಂಬದಲ್ಲಿ ಮೊರ್ದೆಕೈಯನ್ನು ಗಲ್ಲಿಗೆ ಹಾಕಲು ರಾಜ
ನಿಂದ ಅಪ್ಪಣೆ ಪಡೆದುಕೊಳ್ಳಲು ಬಂದಿದ್ದನು. ರಾಜನು,
"ಹೊರಾಂಗಣಕ್ಕೆ ಈಗ ಯಾರು ಬಂದರು?" ಎಂದು
ಕೇಳಿದನು. 5ಸೇವಕರು, "ಹಾಮಾನನು ಹೊರಾಂಗಣ
ದಲ್ಲಿ ನಿಂತಿದ್ದಾನೆ!" ಎಂದು ಹೇಳಿದರು.

"ಸರಿ, ಅವನನ್ನು ಒಳಗೆ ಕರೆದುಕೊಂಡು ಬನ್ನಿರಿ"
ಎಂದು ರಾಜನು ಆಜ್ಞಾಪಿಸಿದನು.

6ಹಾಮಾನನು ಒಳಗೆ ಪ್ರವೇಶಮಾಡುವಾಗ ರಾಜನು,
"ಹಾಮಾನನೇ, ರಾಜನು ಒಬ್ಬನನ್ನು ಗೌರವಿಸಬೇಕೆಂದು
ಇಚ್ಛಿಸಿದರೆ, ಅದನ್ನು ಯಾವ ರೀತಿ ಮಾಡಬೇಕು?"
ಎಂದು ಕೇಳಿದನು.

ಆಗ ಹಾಮಾನನು, "ರಾಜನಿಂದ ಗೌರವಿಸಲ್ಪಡುವಂಥ
ವ್ಯಕ್ತಿ ನನ್ನ ಹೊರತು ಬೇರೆ ಯಾರಿದ್ದಾರೆ? ಅವನು ನನ್ನ
ಬಗ್ಗೆಯೇ ಯೋಚಿಸುತ್ತಿರಬಹುದು" ಎಂದು ತನ್ನ ಮನಸ್ಸಿ
ನಲ್ಲಿ ಅಂದುಕೊಂಡನು.

7ಅವನು ರಾಜನಿಗೆ, "ನೀನು ಗೌರವಿಸಬೇಕೆಂದಿರುವ
ವ್ಯಕ್ತಿಗೆ ಈ ರೀತಿ ಮಾಡಬೇಕು. 8ರಾಜನು ಧರಿಸಿದ
ರಾಜವಸ್ತ್ರಗಳನ್ನು ಮತ್ತು ಸವಾರಿ ಮಾಡಿದ ಕುದುರೆ
ಯನ್ನು ಸೇವಕರ ಮೂಲಕ ತರಿಸಬೇಕು. ಸೇವಕರು
ಅದರ ಹಣೆಯ ಮೇಲೆ ರಾಜನ ವಿಶೇಷ ಗುರುತನ್ನು
ಇಡಬೇಕು. 9ಅನಂತರ ರಾಜನ ಮುಖ್ಯಾಧಿಕಾರಿಗಳಲ್ಲಿ
ಒಬ್ಬನನ್ನು ರಾಜವಸ್ತ್ರಗಳಿಗೂ ಕುದುರೆಗೂ ಜವಾಬ್ದಾರ
ನನ್ನಾಗಿ ನೇಮಿಸಬೇಕು. ರಾಜನು ಯಾವ ವ್ಯಕ್ತಿಯನ್ನು
ಗೌರವಿಸಬೇಕೆಂದಿದ್ದಾನೋ ಆ ವ್ಯಕ್ತಿಗೆ ಅವನು ರಾಜವಸ್ತ್ರ
ವನ್ನು ತೊಡಿಸಬೇಕು. ಆಮೇಲೆ ಅವನನ್ನು ಕುದುರೆಯ
ಮೇಲೆ ಕುಳ್ಳಿರಿಸಿಕೊಂಡು ನಗರದ ಪ್ರಮುಖ ರಸ್ತೆಗಳಲ್ಲಿ
ಮೆರವಣಿಗೆ ಮಾಡಿಸುತ್ತಾ, 'ರಾಜನು ಸನ್ಮಾನಿಸುವ
ವ್ಯಕ್ತಿಗೆ ಹೀಗೆಯೇ ಆಗುವುದು' ಎಂದು ಪ್ರಕಟಿಸುತ್ತಾ
ಹೋಗಲಿ" ಎಂದು ಹೇಳಿದನು.

10ರಾಜನು ಹಾಮಾನನಿಗೆ, "ಈಗಲೇ ಹೋಗಿ
ರಾಜವಸ್ತ್ರಗಳನ್ನೂ ರಾಜನ ಕುದುರೆಯನ್ನೂ
ತೆಗೆದುಕೊಂಡು ಯೆಹೂದ್ಯನಾದ ಮೊರ್ದೆಕೈಗೆ ನೀನು
ಹೇಳಿದ ಪ್ರಕಾರವೇ ಮಾಡು. ಮೊರ್ದೆಕೈ ಅರಮನೆಯ
ಹೆಬ್ಬಾಗಿಲ ಬಳಿಯಲ್ಲಿ ಕುಳಿತುಕೊಂಡಿರುತ್ತಾನೆ. ನಿನ್ನ
ಸಲಹೆಯಂತೆಯೇ ಎಲ್ಲವನ್ನೂ ಮಾಡು" ಅಂದನು.

11ಹಾಮಾನನು ಉಡುಪನ್ನೂ ಕುದುರೆಯನ್ನೂ ತೆಗೆದು
ಕೊಂಡು ಮೊರ್ದೆಕೈಗೆ ತೊಡಿಸಿ, ಕುದುರೆಯ ಮೇಲೆ
ಕುಳ್ಳಿರಿಸಿ ನಗರದ ಮುಖ್ಯರಸ್ತೆಗಳಲ್ಲಿ ಕರೆದುಕೊಂಡು
ಹೋಗುತ್ತಿರುವಾಗ, "ರಾಜನು ಸನ್ಮಾನಿಸುವ ವ್ಯಕ್ತಿಗೆ
ಹೀಗೆಯೇ ಆಗುವುದು" ಎಂದು ಪ್ರಕಟಿಸಿದನು.

12ಇದಾದ ಬಳಿಕ ಮೊರ್ದೆಕೈ ಹೆಬ್ಬಾಗಿಲ ಬಳಿ
ಯಲ್ಲಿದ್ದ ತನ್ನ ಸ್ಥಳಕ್ಕೆ ಹೋದನು. ಆದರೆ ಹಾಮಾನನು
ತನ್ನ ಮನೆಗೆ ಅವಸರದಿಂದ ಹೋದನು. ಅವನು
ನಾಚಿಕೆಯಿಂದಲೂ ಸಿಟ್ಟಿನಿಂದಲೂ ತನ್ನ ಮುಖವನ್ನು
ಮುಚ್ಚಿಕೊಂಡಿದ್ದನು. 13ತನ್ನ ಹೆಂಡತಿ ಜೆರೆಷಳಿಗೂ ಮತ್ತು
ತನಗೆ ಸಲಹೆ ಕೊಟ್ಟಿದ್ದ ಮಿತ್ರವೃಂದದವರಿಗೂ ನಡೆದ
ವಿಷಯ ತಿಳಿಸಿದನು. ಆಗ ಅವರು, "ಮೊರ್ದೆಕೈಯು
ಯೆಹೂದ್ಯನಾಗಿದ್ದರೆ ನೀನು ಜಯಗಳಿಸುವುದಿಲ್ಲ.
ಈಗಲೇ ನೀನು ಸೋಲುತ್ತಿರುವೆ. ನಿಜವಾಗಿಯೂ ನೀನೇ
ನಾಶವಾಗುವೆ" ಎಂದು ಹೇಳಿದರು.

14ಅವರು ಮಾತಾಡುತ್ತಿರುವಾಗಲೇ ರಾಜಕಂಚುಕಿ
ಗಳು ಅವನನ್ನು ರಾಣಿ ಎಸ್ತೇರಳು ಏರ್ಪಡಿಸಿದ್ದ ಔತಣಕ್ಕೆ
ಕರೆದುಕೊಂಡು ಹೋಗಲು ಬಂದರು.

### ಹಾಮಾನನಿಗೆ ಗಲ್ಲುಶಿಕ್ಷೆ

**7** 1ರಾಜನೂ ಹಾಮಾನನೂ ರಾಣಿಯ ಅರಮನೆಗೆ
ಔತಣಕ್ಕಾಗಿ ಹೋದರು. 2ಎರಡನೇ ದಿನದ ಈ
ಔತಣ ಸಮಾರಂಭದಲ್ಲಿ ಅವರಿಬ್ಬರೂ ದ್ರಾಕ್ಷಾರಸ
ಸೇವನೆ ಮಾಡುತ್ತಿರುವಾಗ ಮತ್ತೆ ರಾಜನು ತನ್ನ ರಾಣಿಗೆ,
"ಎಸ್ತೇರ್ ರಾಣಿಯೇ, ನಿನಗೆ ಬೇಕಾದದ್ದನ್ನು ಕೇಳಿಕೊ.
ನಾನು ಕೊಡುವೆನು; ಅರ್ಧ ರಾಜ್ಯ ಬೇಕಾದರೂ ನಾನು
ಕೊಡುತ್ತೇನೆ" ಎಂದನು.

3ಆಗ ಎಸ್ತೇರ್ ರಾಣಿಯು, "ರಾಜನೇ, ನೀನು ನನ್ನನ್ನು
ಮೆಚ್ಚಿ ಪ್ರೀತಿಸುವುದಾದರೆ ದಯಮಾಡಿ ನಾನು ಬದುಕು
ವಂತೆ ಮಾಡು. ಅಲ್ಲದೆ ನನ್ನ ಜನರನ್ನು ಉಳಿಸು. ಇದೇ
ನನ್ನ ಬಿನ್ನಹ. 4ಯಾಕೆಂದರೆ ನಾನು, ನನ್ನ ಜನರೂ
ಕೊಲ್ಲಲ್ಪಡಲು, ನಾಶವಾಗಲು, ಸಂಪೂರ್ಣವಾಗಿ
ನಿರ್ಮೂಲವಾಗಲು ಮಾರಲ್ಪಟ್ಟಿರುತ್ತೇವೆ. ನಾವು ಕೇವಲ
ಗುಲಾಮರಾಗಿ ಮಾರಲ್ಪಟ್ಟಿದರೆ ನಾನು ಸುಮ್ಮನಿರುತ್ತಿದ್ದೆ.
ಯಾಕೆಂದರೆ ಅದು ರಾಜನನ್ನು ತೊಂದರೆಪಡಿಸುವಂಥ
ದೊಡ್ಡ ವಿಷಯವಲ್ಲ" ಎಂದು ಉತ್ತರಿಸಿದಳು.

5ಆಗ ರಾಜನು ಎಸ್ತೇರಳಿಗೆ, "ಹೀಗೆ ನಿನಗೆ ಯಾರು
ಮಾಡಿದರು? ನಿನ್ನ ಜನರಿಗೆ ಇಂಥಾ ಕೆಲಸವನ್ನು
ಮಾಡಲು ಯಾರಿಗೆ ಧೈರ್ಯವಾಯಿತು?" ಎಂದು
ಕೇಳಿದನು.

6ಎಸ್ತೇರಳು ಉತ್ತರಿಸುತ್ತಾ, “ನಮ್ಮನ್ನು ದ್ವೇಷಿಸುವ
ಮನುಷ್ಯನು ಈ ಕೆಟ್ಟ ಹಾಮಾನನೇ” ಎಂದು ಹೇಳಿದಳು.
ಆಗ ಹಾಮಾನನು ಭಯದಿಂದ ನಡುಗಿದನು.
7ರಾಜನು ಕೋಪೋದ್ರಿಕ್ತನಾಗಿ, ಪಾನಪಾತ್ರೆಯನ್ನು
ಅಲ್ಲಿಯೇ ಬಿಟ್ಟು ಎದ್ದು ಹೂತೋಟಕ್ಕೆ ಹೋದನು.
ಹಾಮಾನನು ಕೋಣೆಯಲ್ಲಿಯೇ ಉಳಿದು ತನ್ನ
ಪ್ರಾಣವನ್ನು ಉಳಿಸಬೇಕೆಂದು ಎಸ್ತೇರ್ ರಾಣಿಯನ್ನು
ಬೇಡುತ್ತಿದ್ದನು. ಯಾಕೆಂದರೆ ರಾಜನು ತನ್ನನ್ನು ಕೊಲ್ಲಲು
ತೀರ್ಮಾನಿಸಿರುವುದು ಅವನಿಗೆ ಅರಿವಾಯಿತು.
8ರಾಜನು ಹೂತೋಟದಿಂದ ಹಿಂದಿರುಗಿ ಕೋಣೆ
ಯೊಳಗೆ ಬಂದಾಗ ಹಾಮಾನನು ಆಸನದ ಮೇಲೆ
ಒರಗಿದ್ದ ಎಸ್ತೇರ್ ರಾಣಿಯ ಆಸನದ ಮೇಲೆ ಬೀಳುವು
ದನ್ನು ಕಂಡನು. ರಾಜನು ಸಿಟ್ಟು ತುಂಬಿದವನಾಗಿ,
“ನನ್ನ ಮುಂದೆಯೇ ನೀನು ರಾಣಿಯ ಮೇಲೆ ಕೈಮಾಡು
ತ್ತೀಯಾ?” ಎಂದು ಕೇಳಿದನು.
9ಇದನ್ನು ಹೇಳಿದೊಡನೆಯೇ ಹತ್ತಿರದಲ್ಲಿದ್ದ ಸೇವಕರು
ಬಂದು ಹಾಮಾನನ ಮುಖಕ್ಕೆ ಮುಸುಕುಹಾಕಿದರು. ಅವರ
ಲ್ಲಿದ್ದ ಹರ್ಬೋನ ಎಂಬ ಕಂಚುಕಿಯು, “ಹಾಮಾನನು
ತನ್ನ ಮನೆಯ ಬಳಿಯಲ್ಲಿ ಎಪ್ಪತ್ತೈದು ಅಡಿ ಎತ್ತರದ ಗಲ್ಲು
ಮರವನ್ನು ಮೊರ್ದೆಕೈಗೋಸ್ಕರ ಮಾಡಿಸಿದ್ದಾನೆ. ನಿನ್ನನ್ನು
ಕೊಲ್ಲಲು ನಡೆಸಿದ್ದ ಸಂಚನ್ನು ನಿನಗೆ ತಿಳಿಸಿ ನಿನ್ನನ್ನು
ಕಾಪಾಡಿದವನೇ ಮೊರ್ದೆಕೈ” ಎಂದು ಹೇಳಿದನು.
ಅದಕ್ಕೆ ರಾಜನು, “ಹಾಮಾನನನ್ನು ಅದೇ ಗಲ್ಲುಮರಕ್ಕೆ
ತೂಗುಹಾಕಿರಿ” ಎಂದನು.
10ಮೊರ್ದೆಕೈಗೋಸ್ಕರ ಸಿದ್ಧಮಾಡಿದ್ದ ಗಲ್ಲುಮರಕ್ಕೆ
ಸೇವಕರು ಹಾಮಾನನನ್ನು ತೂಗುಹಾಕಿದರು. ಅನಂತರ
ರಾಜನ ಸಿಟ್ಟು ಇಳಿಯಿತು.

### ಯೆಹೂದ್ಯರಿಗೋಸ್ಕರ ರಾಜಾಜ್ಞೆ

**8** 1ಅದೇ ದಿನದಲ್ಲಿ ರಾಜ ಅಹಷ್ವೇರೋಷನು
ಯೆಹೂದ್ಯರ ವೈರಿಯಾದ ಹಾಮಾನನ ಆಸ್ತಿಪಾಸ್ತಿ
ಗಳನ್ನೆಲ್ಲಾ ರಾಣಿ ಎಸ್ತೇರಳಿಗೆ ಕೊಟ್ಟನು. ಎಸ್ತೇರ್ ರಾಣಿಯು
ರಾಜನಿಗೆ, “ಮೊರ್ದೆಕೈ ತನಗೆ ಸೋದರಣ್ಣನಾಗಬೇಕು”
ಎಂದಳು. ನಂತರ ಮೊರ್ದೆಕೈಯು ರಾಜನನ್ನು ಕಾಣಲು
ಬಂದನು. 2ಹಾಮಾನನಿಂದ ಹಿಂತೆಗೆದುಕೊಂಡಿದ್ದ ತನ್ನ
ಮುದ್ರೆಯುಂಗುರವನ್ನು ರಾಜನು ಮೊರ್ದೆಕೈಗೆ ಕೊಟ್ಟನು.
ಎಸ್ತೇರ್ ರಾಣಿಯು ಹಾಮಾನನ ಆಸ್ತಿಗೆ ಮೊರ್ದೆಕೈನನ್ನು
ಮೇಲ್ವಿಚಾರಕನನ್ನಾಗಿ ಮಾಡಿದಳು.
3ಎಸ್ತೇರಳು ಮತ್ತೆ ರಾಜನನ್ನು ಮಾತಾಡಿಸುವುದಕ್ಕೆ
ಹೋದಳು. ಎಸ್ತೇರಳು ರಾಜನ ಪಾದಗಳಿಗೆ ಅಡ್ಡಬಿದ್ದು
ಅಳಲು ಪ್ರಾರಂಭಿಸಿದಳು. ಅವಳು ಹಾಮಾನನ ದುಷ್ಟ
ಯೋಜನೆಯನ್ನು ರದ್ದುಮಾಡಬೇಕೆಂದು ರಾಜನನ್ನು
ಬೇಡಿಕೊಂಡಳು. ಅಗಾಗನ ವಂಶಿಕನಾದ ಹಾಮಾನನು
ಯೆಹೂದ್ಯರನ್ನು ನಿರ್ಮೂಲ ಮಾಡುವ ಹಂಚಿಕೆಯನ್ನು
ಮಾಡಿದ್ದನು.
4ಎಸ್ತೇರಳಿಗೆ ರಾಜನು ತನ್ನ ರಾಜದಂಡವನ್ನು
ತೋರಿಸಿದಾಗ ಆಕೆಯು ಎದ್ದು ರಾಜನ ಎದುರಿನಲ್ಲಿ
ನಿಂತುಕೊಂಡಳು. 5ಆಕೆ ರಾಜನಿಗೆ, “ನೀವು ನನ್ನನ್ನು ಇಷ್ಟ
ಪಡುವುದಾದರೆ ಮತ್ತು ನಿಮಗೆ ಮೆಚ್ಚಿಕೆಯಾದರೆ ನೀವು
ನನ್ನ ಈ ಬಿನ್ನಹವನ್ನು ಪೂರೈಸಬೇಕು. ಅದೇನೆಂದರೆ,
ರಾಜನ ಪ್ರಾಂತ್ಯಗಳಲ್ಲಿರುವ ಎಲ್ಲಾ ಯೆಹೂದ್ಯರನ್ನು
ನಾಶಮಾಡಬೇಕೆಂದು ಹಾಮಾನನು ಹೊರಡಿಸಿರುವ
ಆಜ್ಞೆಯನ್ನು ರದ್ದುಮಾಡಲು ನೀವು ಇನ್ನೊಂದು ಆಜ್ಞೆಯನ್ನು
ಹೊರಡಿಸಬೇಕು. 6ನನ್ನ ಜನರಿಗೆ ಭಯಂಕರವಾದ ಆ
ಪರಿಸ್ಥಿತಿ ಉಂಟಾಗುವುದನ್ನಾಗಲೀ ನನ್ನ ಕುಟಂಬವು
ಕೊಲ್ಲಲ್ಪಡುವುದನ್ನು ಕಣ್ಣಾರೆ ನೋಡುವುದಕ್ಕಾಗಲೀ
ನನಗೆ ಸಾಧ್ಯವಿಲ್ಲದಿರುವುದರಿಂದ ರಾಜನಲ್ಲಿ ಬೇಡಿಕೊಳ್ಳು
ತ್ತಿದ್ದೇನೆ” ಎಂದಳು.
7ಅಹಷ್ವೇರೋಷನು ಎಸ್ತೇರ್ ರಾಣಿಗೆ ಮತ್ತು
ಮೊರ್ದೆಕೈಗೆ, “ಹಾಮಾನನು ಯೆಹೂದ್ಯರನ್ನು ದ್ವೇಷಿಸಿದ
ಕಾರಣ ಅವನನ್ನು ಗಲ್ಲಿಗೇರಿಸುವಂತೆ ನನ್ನ ಸಿಪಾಯಿಗಳಿಗೆ
ಆಜ್ಞಾಪಿಸಿದೆನು; ಅವನ ಆಸ್ತಿಪಾಸ್ತಿಗಳನ್ನೆಲ್ಲಾ ಎಸ್ತೇರಳ
ವಶಕ್ಕೆ ಕೊಟ್ಟೆನು. 8ಈಗ ಇನ್ನೊಂದು ರಾಜಾಜ್ಞೆಯನ್ನು
ಬರೆಯಿಸಲು ನಾನು ನಿಮಗೆ ಅಧಿಕಾರ ಕೊಡುತ್ತೇನೆ.
ನಿಮಗೆ ಸರಿತೋಚುವ ರೀತಿಯಲ್ಲಿ ಯೆಹೂದ್ಯರಿಗೆ
ಸಹಾಯವಾಗುವಂತೆ ಆ ಆಜ್ಞೆಯನ್ನು ರಾಜನ ಅಧಿಕಾರ
ದೊಡನೆ ಬರೆಸಿ, ರಾಜನ ಉಂಗುರದಿಂದ ಮುದ್ರೆ ಒತ್ತಿರಿ.
ರಾಜ ಮುದ್ರೆಯುಳ್ಳ ಯಾವ ಆಜ್ಞೆಯೂ ರದ್ದಾಗಕೂಡದು”
ಎಂದನು.
9ಕೂಡಲೇ ರಾಜಲೇಖಕರನ್ನು ಕರೆಸಿ ಅವರಿಂದ
ಮೊರ್ದೆಕೈ ಹೇಳಿದಂತೆ ರಾಜಾಜ್ಞೆಯನ್ನು ಸಾಮ್ರಾಜ್ಯದ
ನಾನಾ ಭಾಷೆಗಳಲ್ಲಿ ಬರೆಸಲಾಯಿತು. ಇಂಡಿಯಾದಿಂದ
ಹಿಡಿದು ಇಥಿಯೋಪ್ಯದ ತನಕ ರಾಜ್ಯದ ನೂರಿಪ್ಪತ್ತೇಳು
ಸಂಸ್ಥಾನಗಳ ಅಧಿಕಾರಿಗಳಿಗೆ, ಎಲ್ಲಾ ರಾಜ್ಯಪಾಲರಿಗೆ,
ಜನನಾಯಕರಿಗೆ ಮತ್ತು ಯೆಹೂದ್ಯರಿಗೆ ಆಯಾ ಭಾಷೆಗಳ
ಲಿಪಿಗಳಲ್ಲಿ ಮೂರನೇ ತಿಂಗಳಾದ ಸೀವಾನ್ ಮಾಸದ
ಇಪ್ಪತ್ತಮೂರನೇ ದಿನದಂದ ಬರೆಸಲಾಯಿತು. 10ರಾಜನ
ಆಜ್ಞೆಯ ಪ್ರಕಾರ ಮೊರ್ದೆಕೈ ರಾಜಶಾಸನವನ್ನು ಬರೆಸಿ
ದನು. ಅದಕ್ಕೆ ರಾಜಮುದ್ರೆಯನ್ನು ಒತ್ತಿಸಿ ರಾಜನಿಗಾಗಿ
ವಿಶೇಷವಾಗಿ ಬೆಳೆಸಿದ ಅತ್ಯಂತ ವೇಗವಾಗಿ ಓಡುವ
ಕುದುರೆಗಳ ಮೂಲಕ ಸಂದೇಶವಾಹಕರಿಂದ ರಾಜ್ಯದ
ಮೂಲೆ ಮೂಲೆಗೆ ರಾಜಾಜ್ಞೆಯನ್ನು ಕಳುಹಿಸಿದನು.
11ಆ ರಾಜಾಜ್ಞೆಯು ಹೀಗಿತ್ತು: “ಪ್ರತಿಯೊಂದು ನಗರ
ಗಳಲ್ಲಿರುವ ಯೆಹೂದ್ಯರು ಸ್ವರಕ್ಷಣೆಗೋಸ್ಕರ ಒಟ್ಟಾಗಿ
ಸೇರಿಬರಲು ಅವರಿಗೆ ಹಕ್ಕಿದೆ. ಅಲ್ಲದೆ ಅವರನ್ನು ಕೊಲ್ಲಲು,
ಆಸ್ತಿ ಅಪಹರಿಸಲು ಅವರನ್ನು ನಿರ್ಮೂಲ ಮಾಡುವ
ಉದ್ದೇಶದಿಂದ ಅವರ ಬಳಿಗೆ ಬರುವವರನ್ನು ಎದುರಿಸಿ,
ಕೊಂದು ನಾಶಮಾಡುವ ಹಕ್ಕು ಅವರಿಗಿದೆ. ಯೆಹೂದ್ಯ
ರಿಗೆ ತಮ್ಮನ್ನು ದ್ವೇಷಿಸುವ ವೈರಿಗಳನ್ನು ಕೊಂದು ಅವರ
ಆಸ್ತಿಪಾಸ್ತಿಗಳನ್ನು ಸೂರೆಮಾಡುವ ಹಕ್ಕಿದೆ.”
12ಹೀಗೆ ಮಾಡಲು ಅಹಷ್ವೇರೋಷ್ ರಾಜನ ಎಲ್ಲಾ
ಸಂಸ್ಥಾನಗಳಲ್ಲಿರುವ ಯೆಹೂದ್ಯರಿಗೆ ಹನ್ನೆರಡನೆಯ

ತಿಂಗಳಾದ ಅದಾರ್ ಮಾಸದ ಹದಿಮೂರನೆ ದಿನವನ್ನು
ಗೊತ್ತುಪಡಿಸಲಾಯಿತು. 13ಈ ರಾಜಾಜ್ಞೆಯು ದೇಶದ
ಶಾಸನವಾಯಿತು. ಇದನ್ನು ರಾಜ್ಯದ ಎಲ್ಲಾ ಸಂಸ್ಥಾನಗಳ
ಎಲ್ಲಾ ಜನರಿಗೆ ಪ್ರಕಟಿಸಲಾಯಿತು. ಯಾವ ದಿನದಲ್ಲಿ
ಯೆಹೂದ್ಯರನ್ನು ನಿರ್ಮೂಲ ಮಾಡಲು ಆಜ್ಞೆ ಹೊರಡಿತ್ತೋ
ಆ ದಿನದಲ್ಲಿಯೆ ಯೆಹೂದ್ಯರು ತಮ್ಮ ವೈರಿಗಳನ್ನು
ಎದುರಿಸಿ ಅವರನ್ನು ಕೊಲ್ಲುವುದಕ್ಕೆ ತಯಾರಿರಬೇಕೆಂದು
ಈ ಆಜ್ಞೆಯನ್ನು ಹೊರಡಿಸಲಾಗಿತ್ತು. 14ಈ ಆಜ್ಞೆಯನ್ನು
ಜನರಿಗೆ ಬೇಗನೆ ತಲುಪಿಸಲು ರಾಜನು ಸಂದೇಶವಾಹಕ
ರಿಗೆ ಆಜ್ಞಾಪಿಸಿದನು. ಶೂಷನ್ ನಗರದಲ್ಲೂ ಇದು ಪ್ರಕಟ
ವಾಯಿತು.

15ರಾಜಸನ್ನಿಧಿಯಿಂದ ಮೊರ್ದೆಕೈ ಹೊರಟಾಗ,
ರಾಜನು ಕೊಟ್ಟ ವಿಶೇಷ ವಸ್ತ್ರಗಳನ್ನು ಧರಿಸಿದ್ದನು. ಅದು
ನೀಲಿ ಮತ್ತು ಬಿಳಿ ಬಣ್ಣದಾಗಿತ್ತು. ಅವನು ತಲೆಗೆ ಬಂಗಾ
ರದ ಕಿರೀಟವನ್ನು ತೊಟ್ಟಿದ್ದನು. ಅಲ್ಲದೆ ನೇರಳೇ ಬಣ್ಣದ
ವಸ್ತ್ರವೂ ಅವನಲ್ಲಿತ್ತು. ರಾಜಧಾನಿಯಾದ ಶೂಷನ್
ನಗರದಲ್ಲಿ ವಿಶೇಷ ಸಮಾರಂಭವಾಯಿತು. ಜನರು
ಸಂತೋಷದಿಂದ ನಲಿದಾಡಿದರು. 16ಯೆಹೂದ್ಯರಿಗೆ
ಆ ದಿನ ಅತ್ಯಂತ ಸಂತೋಷದ ದಿನವಾಗಿತ್ತು. ಆ ದಿನ
ಅವರಿಗೆ ಬಹಳ ಆನಂದದ ಮತ್ತು ಹರ್ಷದ ದಿನವಾಗಿತ್ತು.
17ರಾಜನ ಸಾಮ್ರಾಜ್ಯದ ಸಂಸ್ಥಾನಗಳಲ್ಲಿ ಎಲ್ಲೆಲ್ಲಿ
ರಾಜಶಾಸನವು ತಲಪಿತೋ ಅಲ್ಲಲ್ಲಿ ಯೆಹೂದ್ಯ
ರೆಲ್ಲರೂ ಆನಂದದಿಂದ ನಲಿದಾಡಿದರು. ಅದು ಅವರಿಗೆ
ಅತ್ಯಂತ ಸಂತಸದ ದಿನವಾಗಿತ್ತು. ತಮ್ಮತಮ್ಮ ಮನೆ
ಗಳಲ್ಲಿ ಔತಣ ಸಿದ್ಧಪಡಿಸಿದರು. ಸಾಮಾನ್ಯ ಜನರಲ್ಲಿ
ಎಷ್ಟೋ ಮಂದಿ ಯೆಹೂದ್ಯ ಮತಾವಲಂಬಿಗಳಾದರು.
ಯಾಕೆಂದರೆ ಅವರು ಯೆಹೂದ್ಯರಿಗೆ ತುಂಬಾ ಹೆದರಿ ಆ
ರೀತಿ ಮಾಡಿದರು.

### ಯೆಹೂದ್ಯರಿಗೆ ಜಯ

9 1ಹನ್ನೆರಡನೆಯ ತಿಂಗಳಾದ ಅದಾರ್ ಮಾಸದ ಹದಿ
ಮೂರನೇ ದಿನದಲ್ಲಿ ಯೆಹೂದ್ಯರ ವೈರಿಗಳು ರಾಜಾಜ್ಞೆ
ಗನುಸಾರವಾಗಿ ಯೆಹೂದ್ಯರನ್ನು ನಿರ್ನಾಮ ಮಾಡ
ಬೇಕಾಗಿತ್ತು. ಅವರು ಆ ದಿನಕ್ಕಾಗಿ ಕಾಯುತ್ತಿರುವಾಗ ಪರಿ
ಸ್ಥಿತಿಯು ಬದಲಾಯಿತು. ಯೆಹೂದ್ಯರು ಅವರ ಶತ್ರುಗಳಿ
ಗಿಂತ ಬಲಾಢ್ಯರಾದರು. 2ರಾಜನಾದ ಅಹಷ್ವೇರೋಷನ
ಸಾಮ್ರಾಜ್ಯದ ಸಂಸ್ಥಾನಗಳಲ್ಲಿದ್ದ ಯೆಹೂದ್ಯರು ತಮ್ಮನ್ನು
ಕೊಲ್ಲಲು ಬರುವ ವೈರಿಗಳನ್ನು ಎದುರಿಸಲು ಒಟ್ಟಾಗಿ
ಸೇರಿದರು. ಇವರಿಗೆ ವಿರುದ್ಧವಾಗಿ ಹೊಡೆದಾಡಲು
ಯಾರಿಗೂ ಧೈರ್ಯಸಾಲಲಿಲ್ಲ. ಯೆಹೂದ್ಯರ ವಿಷಯದಲ್ಲಿ
ಜನರಿಗೆ ಭೀತಿ ಉಂಟಾಯಿತು. 3ಅಲ್ಲದೆ ಸಂಸ್ಥಾನ
ಗಳಲ್ಲಿದ್ದ ಅಧಿಕಾರಿಗಳು, ರಾಜ್ಯಪಾಲರು, ಆಡಳಿತಾಧಿ
ಕಾರಿಗಳು ಯೆಹೂದ್ಯರಿಗೆ ನೆರವಾದರು. ಯಾಕೆಂದರೆ
ಅವರು ಮೊರ್ದೆಕೈಗೆ ಹೆದರುತ್ತಿದ್ದರು. 4ಮೊರ್ದೆಕೈ
ಅರಮನೆಯಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದನು.
ಸಂಸ್ಥಾನಗಳಲ್ಲಿರುವವರೆಲ್ಲರೂ ಅವನ ಪ್ರಖ್ಯಾತಿಯ ಬಗ್ಗೆ
ಕೇಳಿದ್ದರು. ಮೊರ್ದೆಕೈಯ ಶಕ್ತಿಯು ದಿನದಿಂದ ದಿನಕ್ಕೆ
ಹೆಚ್ಚಾಗತೊಡಗಿತು.

5ತಮ್ಮ ಶತ್ರುಗಳನ್ನೆಲ್ಲಾ ಯೆಹೂದ್ಯರು ಸೋಲಿಸಿ
ತಮ್ಮ ಖಡ್ಗಗಳಿಂದ ನಾಶಮಾಡಿದರು; ತಮ್ಮನ್ನು
ದ್ವೇಷಿಸುತ್ತಿದ್ದವರಿಗೆ ತಮಗಿಷ್ಟ ಬಂದಂತೆ ಮಾಡಿದರು.
6ರಾಜಧಾನಿಯಾದ ಶೂಷನ್‌ನಲ್ಲಿಯೇ ಯೆಹೂದ್ಯರು
ಐನೂರು ಮಂದಿ ಶತ್ರುಗಳನ್ನು ಕೊಂದರು. 7ಅವರಿಂದ
ಕೊಲ್ಲಲ್ಪಟ್ಟವರು ಯಾರೆಂದರೆ: ಪರ್ಷಂದಾತ, ದಲ್ಪೋನ್,
ಅಸ್ಪಾತ, 8ಪೋರಾತ, ಅದಲ್ಯ, ಅರೀದಾತ, 9ಪರ್ಮಷ್ಟ,
ಅರೀಸೈ, ಅರಿದೈ ಮತ್ತು ವೈಜಾತ. 10ಇವರು
ಹಾಮಾನನ ಹತ್ತು ಗಂಡುಮಕ್ಕಳಾಗಿದ್ದರು. ಹಾಮಾನನು
ಹಮ್ಮೆದಾತನ ಮಗನೂ ಯೆಹೂದ್ಯರ ಶತ್ರುವೂ ಆಗಿದ್ದನು.
ಯೆಹೂದ್ಯರು ಅವರನ್ನು ಕೊಂದರೇ ಹೊರತು ಅವರ
ಸ್ವತ್ತುಗಳನ್ನು ಅಪಹರಿಸಲಿಲ್ಲ.

11ಶೂಷನ್ ನಗರದಲ್ಲಿ ಆ ದಿನ ಎಷ್ಟು ಮಂದಿ ಸತ್ತರು
ಎಂದು ರಾಜನು ಕೇಳಿ ತಿಳಿದುಕೊಂಡನು. 12ಮತ್ತು
ರಾಣಿಯಾದ ಎಸ್ತೇರಳಿಗೆ, "ಶೂಷನ್‌ನಲ್ಲಿ ಯೆಹೂದ್ಯರು
ಹಾಮಾನನ ಹತ್ತು ಗಂಡುಮಕ್ಕಳೂ ಸೇರಿದಂತೆ
ಐನೂರು ಮಂದಿಯನ್ನು ಕೊಂದಿದ್ದಾರೆ. ಇನ್ನು ಬೇರೆ
ಸಂಸ್ಥಾನಗಳಲ್ಲಿ ನಿನಗೇನಾಗಬೇಕು? ನನಗೆ ಹೇಳು.
ನಾನು ಹಾಗೆಯೇ ಮಾಡಿಸುತ್ತೇನೆ" ಎಂದು ಹೇಳಿದನು.

13ಅದಕ್ಕೆ ಎಸ್ತೇರಳು, "ರಾಜನು ಇಷ್ಟಪಟ್ಟಲ್ಲಿ
ನಾಳೆಯೂ ಶೂಷನ್‌ನಲ್ಲಿರುವ ಯೆಹೂದ್ಯರು ಹೀಗೆಯೇ
ಮಾಡಲಿ ಮತ್ತು ಹಾಮಾನನ ಆ ಹತ್ತು ಮಂದಿ ಗಂಡು
ಮಕ್ಕಳನ್ನು ಗಲ್ಲುಕಂಬದಲ್ಲಿ ನೇತಾಡಿಸಲಿ" ಅಂದಳು.

14ಅದೇ ರೀತಿ ರಾಜನು ಆಜ್ಞಾಪಿಸಿದನು. ರಾಜಾಜ್ಞೆಯು
ಇನ್ನೊಂದು ದಿನ ಮುಂದುವರಿಯಿತು ಮತ್ತು ಹಾಮಾನನ
ಹತ್ತು ಮಂದಿ ಗಂಡುಮಕ್ಕಳನ್ನು ಗಲ್ಲಿಗೆ ಹಾಕಿದರು.
15ಶೂಷನ್ ನಗರದಲ್ಲಿದ್ದ ಯೆಹೂದ್ಯರು ಅದಾರ್
ಮಾಸದ ಹದಿನಾಲ್ಕನೆಯ ದಿನದಂದು ಒಟ್ಟಾಗಿ ಸೇರಿ
ಆ ದಿನ ಮುನ್ನೂರು ಮಂದಿಯನ್ನು ಕೊಂದರೇ ಹೊರತು
ಅವರ ಆಸ್ತಿಪಾಸ್ತಿಯನ್ನು ಮುಟ್ಟಲಿಲ್ಲ.

16ಅದೇ ಸಮಯದಲ್ಲಿ ಇತರ ಸಂಸ್ಥಾನಗಳಲ್ಲಿದ್ದ
ಯೆಹೂದ್ಯರು ಒಟ್ಟಾಗಿ ಸೇರಿಬಂದು ಒಗ್ಗಟ್ಟಿನಿಂದ ತಮ್ಮ
ವೈರಿಗಳನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿದರು.
ಹೀಗೆ ಒಟ್ಟು ಎಪ್ಪತ್ತೈದು ಸಾವಿರ ಜನರು ಕೊಲ್ಲಲ್ಪಟ್ಟರು.
ಆದರೆ ಅವರ ಆಸ್ತಿಯನ್ನು ಸೂರೆ ಮಾಡಲಿಲ್ಲ. 17ಅದಾರ್
ಮಾಸದ ಹದಿಮೂರನೇ ದಿನದಲ್ಲಿ ಈ ಕಾರ್ಯವು
ನಡೆಯಿತು. ಹದಿನಾಲ್ಕನೆಯ ದಿನದಲ್ಲಿ ಅವರು ವಿಶ್ರಾಂತಿ
ತೆಗೆದುಕೊಂಡರು. ಆ ದಿನವನ್ನು ಯೆಹೂದ್ಯರು ತಮ್ಮ
ಸಂತಸದ ದಿನವಾಗಿ ಆಚರಿಸಿದರು.

### ಪೂರಿಮ್ ಹಬ್ಬ

18ಅದಾರ್ ತಿಂಗಳಿನ ಹದಿಮೂರನೇ ಮತ್ತು ಹದಿ
ನಾಲ್ಕನೇ ದಿನಗಳಲ್ಲಿ ಶೂಷನ್ ನಗರದ ಯೆಹೂದ್ಯರು
ಒಟ್ಟಾಗಿ ಸೇರಿಬಂದಿದ್ದರಿಂದ ಹದಿನೈದನೆಯ ದಿನದಲ್ಲಿ

ಅವರು ವಿಶ್ರಾಂತಿ ತೆಗೆದುಕೊಂಡರು. ಹದಿನೈದನೆಯ
ದಿನವನ್ನು ಅವರು ಸಂತಸದ ಹಬ್ಬವನ್ನಾಗಿ ಮಾಡಿದರು.
19ದೇಶದ ಎಲ್ಲಾ ಹಳ್ಳಿಗಳಲ್ಲಿದ್ದ ಯೆಹೂದ್ಯರು ಅದಾರ್
ತಿಂಗಳಿನ ಹದಿನಾಲ್ಕನೆಯ ದಿನವನ್ನು ಪೂರಿಮ್ ದಿನ
ವನ್ನಾಗಿ ಆಚರಿಸಿದರು. ಹದಿನಾಲ್ಕನೆಯ ದಿನವು ಅವರಿಗೆ
ಸಂತಸದ ಹಬ್ಬ. ಆ ದಿನ ಅವರು ಔತಣಮಾಡಿ ಒಬ್ಬರಿ
ಗೊಬ್ಬರು ಉಡುಗೊರೆಗಳನ್ನು ಕೊಟ್ಟು ಕಳುಹಿಸಿದರು.

20ನಡೆದ ಸಂಗತಿಗಳನ್ನೆಲ್ಲಾ ಮೊರ್ದೆಕೈ ಬರೆದಿಟ್ಟು
ಅಹಷ್ವೇರೋಷನ ಸಾಮ್ರಾಜ್ಯದಲ್ಲಿ ದೂರದಲ್ಲಿದ್ದ ಮತ್ತು
ಹತ್ತಿರದಲ್ಲಿದ್ದ ಎಲ್ಲಾ ಯೆಹೂದ್ಯರಿಗೂ ಪತ್ರ ಬರೆಸಿದನು.
21ಅದರಲ್ಲಿ ಅವನು ಯೆಹೂದ್ಯರೆಲ್ಲರೂ ಪ್ರತೀ ವರ್ಷ
ಅದಾರ್ ತಿಂಗಳಿನ ಹದಿನಾಲ್ಕನೇ ಮತ್ತು ಹದಿನೈದನೇ
ದಿನಗಳನ್ನು ಪೂರಿಮ್ ದಿನಗಳನ್ನಾಗಿ ಆಚರಿಸಬೇಕು
ಎಂಬದಾಗಿ ಆದೇಶ ನೀಡಿದನು. 22ಯಾಕೆಂದರೆ ಆ ದಿನ
ದಲ್ಲಿ ಯೆಹೂದ್ಯರು ತಮ್ಮ ಶತ್ರುಗಳನ್ನು ಸದೆಬಡಿದರು.
ಆ ದಿನದಲ್ಲಿ ಅವರಿಗೆ ಶೋಕದ ಬದಲಾಗಿ ಸಂತಸವು
ಒದಗಿಬಂತು. ಆ ದಿನದಲ್ಲಿ ಅವರ ರೋದನವು ಹರ್ಷಧ್ವನಿ
ಯಾಗಿ ಮಾರ್ಪಟ್ಟಿತು. ಮೊರ್ದೆಕೈಯು ಎಲ್ಲಾ ಯೆಹೂದ್ಯ
ರಿಗೆ ಪತ್ರ ಬರೆಸಿದನು. ಆ ದಿನದಲ್ಲಿ ಹಬ್ಬವನ್ನು ಆಚರಿಸಿ
ಒಬ್ಬರಿಗೊಬ್ಬರು ಉಡುಗೊರೆಗಳನ್ನು ಕೊಡಬೇಕೆಂದು
ಬರೆಸಿದನು.

23ಮೊರ್ದೆಕೈ ಪತ್ರದಲ್ಲಿ ಬರೆದದ್ದನ್ನು ಯೆಹೂದ್ಯರು
ಒಪ್ಪಿಕೊಂಡು ಆ ವರ್ಷದಲ್ಲಿ ನಡೆದ ಉತ್ಸವವು ತಮ್ಮಲ್ಲಿ
ವಾರ್ಷಿಕ ಉತ್ಸವವಾಗಬೇಕೆಂದು ನಿರ್ಧರಿಸಿದರು.

24ಅಗಾನನ ವಂಶದವನಾದ ಹಮ್ಮೆದಾತನ
ಮಗನಾದ ಹಾಮಾನನು ಸಮಸ್ತ ಯೆಹೂದ್ಯರ ಶತ್ರು
ವಾಗಿದ್ದನು. ಯೆಹೂದ್ಯರನ್ನೆಲ್ಲಾ ಸಂಹರಿಸಲು ಅವನು
ಒಂದು ದುಷ್ಟಸಂಚನ್ನು ಮಾಡಿದನು; ಮತ್ತು ಆ ನಿರ್ದಿಷ್ಟ
ದಿನಕ್ಕಾಗಿ ಅವನು ಚೀಟು ಹಾಕಿದನು. ಆ ದಿನಗಳಲ್ಲಿ
ಚೀಟು ಹಾಕುವುದಕ್ಕೆ “ಪೂರ್” ಎಂದು ಹೇಳುತ್ತಿದ್ದರು.
ಆದ್ದರಿಂದ ಆ ಹಬ್ಬವು “ಪೂರೀಮ್” ಎಂಬ ಹೆಸರಿನಿಂದ
ಕರೆಯಲ್ಪಟ್ಟಿತ್ತು. 25ಹಾಮಾನನ ಕುತಂತ್ರವನ್ನು ಎಸ್ತೇರ್
ರಾಣಿಯು ರಾಜನ ಸಂಗಡ ಮಾತಾಡುವುದರ ಮೂಲಕ
ನಿರರ್ಥಕಗೊಳಿಸಿ ಅವನಿಗೂ ಅವನ ಕುಟುಂಬಕ್ಕೂ
ಮರಣವಾಗುವಂತೆ ಮಾಡಿದಳು. ಹಾಮಾನನೂ ಅವನ
ಗಂಡುಮಕ್ಕಳೂ ಗಲ್ಲಿಗೇರಿಸಲ್ಪಟ್ಟರು.

26–27ಚೀಟು ಹಾಕುವುದಕ್ಕೆ, “ಪೂರಿಮ್” ಎಂದು
ಕರೆಯುತ್ತಿದ್ದುದರಿಂದ ಈ ಹಬ್ಬಕ್ಕೆ “ಪೂರಿಮ್” ಎಂದು
ಹೆಸರಿಟ್ಟರು. ಮೊರ್ದೆಕೈ ಈ ಹಬ್ಬವನ್ನು ಆಚ
ರಿಸಲು ಯೆಹೂದ್ಯರೆಲ್ಲರಿಗೆ ಪತ್ರದ ಮೂಲಕ ತಿಳಿಸಿ
ದನು. ಅಂದಿನಿಂದ ಪ್ರತಿ ವರ್ಷ ಈ ಎರಡು ದಿನಗಳಲ್ಲಿ
ಹಬ್ಬವನ್ನು ಆಚರಿಸುವ ಕ್ರಮವನ್ನು ಇಟ್ಟುಕೊಂಡರು.
28ತಮ್ಮ ವೈರಿಗಳಿಗಾದ ದಂಡನೆಯನ್ನು ಅವರು ಈ
ಹಬ್ಬದಲ್ಲಿ ಜ್ಞಾಪಕ ಮಾಡಿಕೊಳ್ಳುವರು. ಯೆಹೂದ್ಯರ ಎಲ್ಲಾ
ಗೋತ್ರಗಳವರು ಮತ್ತು ಅವರ ಪ್ರಾಂತ್ಯಗಳಲ್ಲಿರುವವರು
ಈ ದಿನಗಳನ್ನು ಪ್ರತಿ ವರ್ಷ ಸರಿಯಾದ ಸಮಯದಲ್ಲಿ
ಸರಿಯಾದ ರೀತಿಯಲ್ಲಿ ಈ ಹಬ್ಬವನ್ನು ಪ್ರತಿಯೊಂದು
ಪ್ರಾಂತ್ಯಗಳಲ್ಲಿಯೂ ಪ್ರತಿಯೊಂದು ಊರುಗಳಲ್ಲಿಯೂ
ನೆನಪುಮಾಡಿಕೊಳ್ಳುವರು. ಇಂದಿಗೂ ಯೆಹೂದ್ಯರು ಈ
ದಿನಗಳನ್ನು ನೆನಪುಮಾಡಿಕೊಂಡು ಪೂರಿಮ್ ಹಬ್ಬವನ್ನು
ಆಚರಿಸುತ್ತಾರೆ.

29ಅಬೀಹೈಲನ ಮಗಳಾದ ಎಸ್ತೇರ್ ರಾಣಿಯು
ಮತ್ತು ಯೆಹೂದಿಯಾದ ಮೊರ್ದೆಕೈಯು ಈ ಪೂರಿಮ್
ಹಬ್ಬದ ಬಗ್ಗೆ ಒಂದು ಅಧಿಕೃತ ಪತ್ರವನ್ನು ಬರೆಸಿದರು.
ಜನರು ಅವರ ಎರಡನೆಯ ಪತ್ರವನ್ನು ಸತ್ಯವೆಂದು
ನಂಬುವ ಹಾಗೆ ರಾಜಮುದ್ರೆ ಹಾಕಿದರು. 30ರಾಜನ
ನೂರಿಪ್ಪತ್ತೇಳು ಸಂಸ್ಥಾನಗಳಲ್ಲಿರುವ ಯೆಹೂದ್ಯರಿ
ಗೆಲ್ಲಾ ಮೊರ್ದೆಕೈಯು ಈ ಪತ್ರವನ್ನು ಕಳುಹಿಸಿದನು.
ಅದರಲ್ಲಿ, ಈ ಹಬ್ಬವು ಜನರ ಮಧ್ಯದಲ್ಲಿ ಸಮಾಧಾನ
ಹುಟ್ಟಿಸಿ ಪರಸ್ಪರ ನಂಬಿಕೆ ಬೆಳೆಸುವುದು ಎಂದು ಬರೆ
ದಿದ್ದನು. 31ಅಲ್ಲದೆ ಪೂರಿಮ್ ಹಬ್ಬವನ್ನು ಆಚರಿಸಲು
ಪ್ರಾರಂಭಿಸಿರಿ ಎಂದೂ ಬರೆದಿದ್ದನು. ಈ ಹಬ್ಬವನ್ನು
ಯಾವ ದಿನ ಆಚರಿಸಬೇಕು ಎಂಬುದನ್ನೂ ಬರೆದಿದ್ದನು.
ಈ ಎರಡು ವಿಶ್ರಾಂತಿ ದಿನಗಳನ್ನು ತಮಗೂ ತಮ್ಮ
ಸಂತಾನಗಳವರಿಗೂ ಖಾಯಂಗೊಳಿಸಲು ಯೆಹೂದಿ
ಯಾದ ಮೊರ್ದೆಕೈಯೂ ರಾಣಿ ಎಸ್ತೇರಳೂ ಯೆಹೂದ್ಯ
ರಿಗೆ ಒಂದು ಆಜ್ಞೆಯನ್ನು ಹೊರಡಿಸಿದರು. ತಮಗೆ
ಸಂಬಂಧಿಸಿದ ಕೆಟ್ಟಸಂಗತಿಗಳನ್ನು ನೆನಪಿಗೆ ತಂದು
ಕೊಂಡು ಬೇರೆ ವಿಶ್ರಾಂತಿ ದಿನಗಳಲ್ಲಿ ಉಪವಾಸವಿದ್ದು
ಗೋಳಾಡುವಂತೆ ಈ ಹಬ್ಬದ ದಿನಗಳಲ್ಲಿಯೂ ಅವರು
ಮಾಡುವರು. 32ಎಸ್ತೇರಳ ಈ ಆಜ್ಞೆಯು ಅಧಿಕೃತ
ವಾಗಿದ್ದು ಪುಸ್ತಕದಲ್ಲಿ ಬರೆಯಲ್ಪಟ್ಟಿತು.

## ಮೊರ್ದೆಕೈಗೆ ಸನ್ಮಾನ

**10** 1ಅಹಷ್ವೇರೋಷ್ ರಾಜನು ತನ್ನ ಪ್ರಜೆ
ಗಳಿಂದ ತೆರಿಗೆಯನ್ನು ಎತ್ತಿದನು. ಅವನ
ಸಾಮ್ರಾಜ್ಯದ ಪ್ರಜೆಗಳೆಲ್ಲರೂ ಹಾಗೂ ದೂರದ
ಕರಾವಳಿಯ ನಗರವಾಸಿಗಳೂ ತೆರಿಗೆಯನ್ನು ಕಟ್ಟ
ಬೇಕಾಯಿತು. 2ಅಹಷ್ವೇರೋಷ್ ರಾಜನು ಮಾಡಿದ
ಎಲ್ಲಾ ಮಹತ್ಕಾರ್ಯಗಳೂ ಕೃತ್ಯಗಳೂ *ಮೇದ್ಯ* ಮತ್ತು
*ಪರ್ಶಿಯ ರಾಜರ ರಾಜಕಾಲವೃತ್ತಾಂತ* ಪುಸ್ತಕಗಳಲ್ಲಿ
ಬರೆಯಲ್ಪಟ್ಟಿರುತ್ತವೆ; ಮೊರ್ದೆಕೈ ಮಾಡಿದ ವಿಷಯಗಳ
ಬಗ್ಗೆಯೂ ಬರೆಯಲ್ಪಟ್ಟಿದೆ. ಮೊರ್ದೆಕೈಯನ್ನು ರಾಜನು
ಬಹು ದೊಡ್ಡ ಪ್ರಭಾವಶಾಲಿ ವ್ಯಕ್ತಿಯನ್ನಾಗಿ ಮಾಡಿದನು.
3ರಾಜನ ನಂತರ ಯೆಹೂದಿಯಾದ ಮೊರ್ದೆಕೈಯೇ
ರಾಜ್ಯದಲ್ಲಿ ಮುಖ್ಯ ವ್ಯಕ್ತಿಯಾಗಿದ್ದನು. ರಾಜ್ಯದಲ್ಲಿ ಅವನಿಗೆ
ಎರಡನೇ ಸ್ಥಾನವಿತ್ತು. ಯೆಹೂದ್ಯರೊಳಗೆ ಅವನು
ಪ್ರಮುಖ ವ್ಯಕ್ತಿಯಾಗಿದ್ದನು. ಯೆಹೂದ್ಯರೆಲ್ಲರೂ ಅವನನ್ನು
ಬಹಳವಾಗಿ ಗೌರವಿಸುತ್ತಿದ್ದರು. ತನ್ನ ಜನರ ಒಳಿತಿಗಾಗಿ
ಮೊರ್ದೆಕೈ ಬಹಳವಾಗಿ ಪ್ರಯಾಸಪಟ್ಟಿದ್ದರಿಂದ ಜನರು
ಅವನನ್ನು ಸನ್ಮಾನಿಸಿದರು; ಮೊರ್ದೆಕೈ ಯೆಹೂದ್ಯ
ರೆಲ್ಲರಿಗೆ ಸಮಾಧಾನವನ್ನು ತಂದನು.